ಹಿಂದಣ ಹೆಜ್ಜೆ

ಸಂಯೋಜನೆ: ಡಾ. ಎಂ. ಭೈರಪ್ಪ

## ಹಿಂದಣ ಹೆಜ್ಜೆಯ ಅರಿವು

ಕನ್ನಡ ನುಡಿಪರಂಪರೆಯನ್ನು ತಮ್ಮ ಅನುಭಾವದ ಮುಖೇನ ಬೆಳಗಿದ ದಾರ್ಶನಿಕರಲ್ಲಿ ಅಲ್ಲಮ ಇತ್ತ ಅರಿವು ಮಹತ್ತರವಾದುದು. 'ಹಿಂದಣ ಹೆಜ್ಜೆಯ ಕಂಡಲ್ಲದೆ ನಿಂದ ಹೆಜ್ಜೆಯನರಿಯಬಾರದು...' ಎಂಬ ಅಲ್ಲಮನುಡಿಯು ಇಂದಿನ ಹೆಜ್ಜೆಯನ್ನು ಸಮರ್ಥವಾಗಿ ಇಡಬೇಕಾದರೆ ಹಿಂದಣ ಹೆಜ್ಜೆಗಳನ್ನು ಸೂಕ್ಷ್ಮವಾಗಿ ಅರಿಯುವುದು ಅತ್ಯಗತ್ಯ ಎಂಬುದನ್ನು ಪ್ರತಿಧ್ವನಿಸುತ್ತದೆ. ಗ್ರಾಮಲೋಕದ ಅನುಭಾವಿಕ ಜಾನಪದರು 'ಹಿಂದ್ಕು ಮುಂದ್ಕು ನೋಡ್ಕಂಡು ಸರೀಗ ನಡಿ' ಎಂದಿರುವ ನುಡಿಯೂ ಇವತ್ತಿನವರಲ್ಲಿ ಬೆಳಗಬೇಕಾದ ಅವತ್ತಿನವರ ತಿಳಿವನ್ನೇ ಸೂಚಿಸುತ್ತದೆ. ಇಂಥ ನುಡಿಬೆಳಗು ನಮ್ಮ ಬದುಕಿಗೆ ಮಾತ್ರವಲ್ಲದೇ, ಬೌದ್ಧಿಕ ನಡೆಗೂ ಮಾರ್ಗದರ್ಶಕವಾಗಿದೆ. ಕನ್ನಡ ಸಂಶೋಧನ ಚರಿತ್ರೆಯಲ್ಲಿ ವಿದ್ವನ್ಮಣಿಗಳಾಗಿ ಬೆಳಗಿದ ಹಿಂದಣ ಸಂಶೋಧಕ ಸಾಲುದೀಪಗಳನ್ನು ಇಂದಿನ–ಹೊಸತಲೆಮಾರಿನ ಸಂಶೋಧಕರು ತಮ್ಮೊಳಗೆ ಅಂತಸ್ಥ ಮಾಡಿಕೊಂಡು ಸಾಗಬೇಕಿದೆ. ಹಿಂದಿನ ಸಂಶೋಧನ ಮಹಾಶಯರು ಸಾಗಿಬಂದಿರುವ ಹಾದಿಯೊಳಗೆ ಕಾಣುವ ನುಡಿಬದ್ಧತೆ, ಪ್ರಬುದ್ಧತೆ, ಪ್ರಖರ ಪಾಂಡಿತ್ಯ, ಶೋಧನಶಿಸ್ತು, ಸಂಯಮ, ಬಹುಶಿಸ್ತೀಯ ತಿಳಿವು, ಅವಿರತ ಕ್ಷೇತ್ರಕಾರ್ಯ, ತರ್ಕಬದ್ಧ ನಿರೂಪಣೆ, ಆರೋಗ್ಯಪೂರ್ಣ ಸಂವಾದ, ತಪ್ಪು–ಒಪ್ಪುಗಳ ವಿನಯಪೂರ್ಣ ಸ್ವೀಕಾರ ಮೊದಲಾದ ಗುಣಗಳು ವರ್ತಮಾನದ ಸಂಶೋಧಕರಿಗೆ ಮಾದರಿಯಾಗಿವೆ. ಹೀಗಾಗಿ ಹಿರಿಯರ ಇಂಥ ಮಹಾಮಾರ್ಗವನ್ನು ನಮ್ಮ ಕಾಲದ ಸಂಶೋಧಕರು ಅರಿಯುವ ಮೂಲಕ ತಮ್ಮ ಸಂಶೋಧನ ಮಾರ್ಗವನ್ನು ಬೆಳಗಿಕೊಳ್ಳುವಂತಾಗಲಿ ಎಂಬ ಮಹದಾಶಯದಲ್ಲಿ "ಹಿಂದಣ ಹೆಜ್ಜೆಯ ಅರಿವು" ಎಂಬ ಕಾಲಂ ಆರಂಭಿಸಲಾಗಿದೆ. ಕನ್ನಡ ಸಂಶೋಧನ ಚರಿತ್ರೆಯಲ್ಲಿ ಜಾನಪದ, ಹಳಗನ್ನಡ, ನಡುಗನ್ನಡ, ಹೊಸಗನ್ನಡ, ವ್ಯಾಕರಣ, ನಿಘಂಟು, ಛಂದಸ್ಸು, ಭಾಷಾವಿಜ್ಞಾನ, ಕಾವ್ಯಮೀಮಾಂಸೆ ಮೊದಲಾದ ಕ್ಷೇತ್ರಗಳಲ್ಲಿ ಹಿರಿಯ ಸಂಶೋಧಕರು ಮೂಡಿಸಿರುವ ಗುರುತರವಾದ ಹೆಜ್ಜೆಗಳನ್ನು ಅರಿಯುವ ನಿಟ್ಟಿನಲ್ಲಿ ಪ್ರತೀ ತಿಂಗಳು ಪ್ರಾತಿನಿಧಿಕ ಸಂಶೋಧನ ಲೇಖನವೊಂದನ್ನು ಇಲ್ಲಿ ನೀಡಲಾಗುವುದು. ಕನ್ನಡ ಸಂಶೋಧನಯಾನದ ಹಿಂದಣ ಹೆಜ್ಜೆಯ ಅರಿತು ಇಂದಿನ ಹೆಜ್ಜೆಯು ದೀಪ್ತಗೊಳ್ಳಲಿ ಎಂಬ ಆಶಯ ನಮ್ಮದು.

# ಜೈನ ದೃಷ್ಟಿಯಲ್ಲಿ ಸ್ತ್ರೀ

ಕಮಲಾ ಹಂಪನಾ

ಸಂಯೋಜನೆ: ಕುಪ್ಪನಹಳ್ಳಿ ಎಂ. ಭೈರಪ್ಪ

DOI: https://doi.org/10.5281/zenodo.11126790

**ಆಶಯ:**

ಕನ್ನಡ ಮಹಿಳಾ ಸಾಹಿತ್ಯ ಜಗತ್ತಿನಲ್ಲಿ ಅಚ್ಚಳಿಯದ ಹೆಜ್ಜೆ ಗುರುತುಗಳನ್ನು ಮೂಡಿಸಿದವರಲ್ಲಿ ಡಾ.ಕಮಲಾ ಹಂಪನಾ ಅವರು ಪ್ರಮುಖರಾಗಿದ್ದಾರೆ. ಕಥೆ, ಕಾವ್ಯ, ನಾಟಕ, ಕಾದಂಬರಿ ಕ್ಷೇತ್ರಗಳಲ್ಲಿ ಗಣನೀಯ ಕೃಷಿ ಮಾಡಿರುವ ಹಲವಾರು ಲೇಖಕಿಯರು ನಮಗೆ ಸಿಗುತ್ತಾರೆ. ಆದರೆ ಸಂಶೋಧನೆ, ಸಂಪಾದನೆಯಂಥ ವಿದ್ವತ್ ಕ್ಷೇತ್ರಗಳಲ್ಲಿ ತೊಡಗಿಸಿಕೊಂಡು ಮಹತ್ತರವಾದ ಕಾಣ್ಕೆಯನ್ನು ನೀಡಿದ ಲೇಖಕಿಯರು ಅಪರೂಪ. ಅಂತಹ ಅಪರೂಪದ ಸಂಶೋಧಕಿಯರಲ್ಲಿ ಕಮಲಾ ಹಂಪನಾ ಅವರು ಅಗ್ರಗಣ್ಯರಾಗಿ ಕಾಣುತ್ತಾರೆ. ಸಾಮಾಜಿಕ ತಾರತಮ್ಮ ಹಾಗೂ ಲಿಂಗ ತಾರತಮ್ಯಗಳ ನಡುವೆ ಹಲವಾರು ಸವಾಲುಗಳನ್ನು ದಾಟಿಕೊಂಡು ಅಧ್ಯಯನ ನಡೆಸಿ, ಬೋಧನೆ–ಸಂಶೋಧನೆಯ ಬೇಸಾಯದಲ್ಲಿ ಗುರುತರವಾದ ಸಾಧನೆಗೈದು ಮಾದರಿ ಮಹಿಳೆ ಎಂಬ ಪ್ರಶಂಸೆಗೆ ಪಾತ್ರರಾಗಿದ್ದಾರೆ.

ಡಾ.ಕಮಲಾ ಹಂಪನಾ ಅವರು ಬೆಂಗಳೂರು ಜಿಲ್ಲೆ ದೇವನಹಳ್ಳಿಯಲ್ಲಿ 1935ರ ಅಕ್ಟೋಬರ್ 28 ರಂದು ಜನಿಸಿದರು. ತಂದೆ ಸಿ.ರಂಗಧಾಮನಾಯಕ್, ತಾಯಿ ಲಕ್ಷಮ್ಮ. ತಂದೆ–ತಾಯಿಯರದ್ದು ಅಂತರ್ಜಾತಿ ವಿವಾಹ. ಚಳ್ಳಕೆರೆಯಲ್ಲಿ ಪ್ರಾರಂಭವಾದ ಪ್ರಾಥಮಿಕ ವಿದ್ಯಾಭ್ಯಾಸ ಬೇರೆ ಬೇರೆ ಊರುಗಳಲ್ಲಿ ಮುಂದುವರಿಯಿತು. ತುಮಕೂರಿನಲ್ಲಿ ಹೈಸ್ಕೂಲ್ ವಿದ್ಯಾಭ್ಯಾಸವಾಗಿ, ಕಾಲೇಜು ವಿದ್ಯಾಭ್ಯಾಸ ಮೈಸೂರಿನಲ್ಲಿ ಮುಂದುವರೆದು ಬಿ.ಎ. ಆನರ್ಸ್ (1958) ಮಾಡಿದರು. ಕನ್ನಡ ಅಧ್ಯಾಪಕಿಯಾಗಿ (1959) ಶಿಕ್ಷಣ ವೃತ್ತಿಗೆ ಪ್ರವೇಶಿಸಿ, ಬೆಂಗಳೂರು ಮತ್ತು ಮೈಸೂರು ಮಹಾರಾಣಿ ಕಾಲೇಜುಗಳಲ್ಲಿ ಪ್ರಾಧ್ಯಾಪಕರಾಗಿ, ಬೆಂಗಳೂರಿನ ವಿಜಯನಗರದ ಸರಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಪ್ರಾಂಶುಪಾಲರಾಗಿ ಕಾರ್ಯ ನಿರ್ವಹಿಸಿದರು. ಸರ್ಕಾರಿ ಸೇವೆಯಿಂದ ನಿವೃತ್ತರಾದ ಮೇಲೆ ಮೈಸೂರು ವಿಶ್ವವಿದ್ಯಾಲಯದ ಜೈನಶಾಸ್ತ್ರ, ಪ್ರಾಕೃತ ಅಧ್ಯಯನದ ಪ್ರಾಧ್ಯಾಪಕರೂ, ಅಧ್ಯಕ್ಷರೂ ಅಗಿದ್ದಲ್ಲದೆ, ಹಂಪಿ ವಿಶ್ವವಿದ್ಯಾನಿಲಯದ ಸಂದರ್ಶಕ ಪ್ರಾಧ್ಯಾಪಕರೂ ಆಗಿದ್ದರು. ಬೆಂಗಳೂರು ವಿಶ್ವವಿದ್ಯಾಲಯದ ಅಕಾಡೆಮಿಕ್ ಕೌನ್ಸಿಲ್ ಮತ್ತು ಸೆನೆಟ್ ಸದಸ್ಯರಾಗಿಯೂ ಕೆಲಸ ಮಾಡಿದ ಸಾಧಕಿ ಇವರು.

18ನೇ ಶತಮಾನದ ಪರಮದೇವ ಕವಿಯ 'ತುರಂಗ ಭಾರತ–ಒಂದು ಅಧ್ಯಯನ' ಎಂಬ ವಿಷಯದ ಮೇಲೆ ಮಹಾಪ್ರಬಂಧವನ್ನು ರಚಿಸಿ ಡಾಕ್ಟರೇಟ್ ಪಡೆದರು. ಹಲವಾರು ಕಡೆ ದೇಶ ವಿದೇಶಗಳಲ್ಲಿ ನಡೆದ ಸಮ್ಮೇಳನ ವಿಚಾರ ಸಂಕೀರಣಗಳಲ್ಲಿ ಲೇಖನಗಳನ್ನು ಬರೆದು ಪ್ರಸ್ತುತಪಡಿಸಿದರು. ಅಂತರರಾಷ್ಟ್ರೀಯ ವಿಚಾರ ಸಂಕಿರಣಗಳಲ್ಲಿ ಭಾಗವಹಿಸಿದ ಲೇಖಕಿಯರಲ್ಲಿ ಕಮಲಾ ಅವರೆ ಮೊದಲಿಗರು. ಟೊರೆಂಟೋ, ಕೆನಡಾ, ಬುಡಾಪೆಸ್ಟ್ ಮುಂತಾದ ಕಡೆಗಳಲ್ಲಿ ಶೈಕ್ಷಣಿಕ ಪ್ರವಾಸ ಮಾಡಿ ಉಪನ್ಯಾಸಗಳನ್ನು ನೀಡಿದರು. ಮುಂಬಯಿ, ಮದ್ರಾಸ್ ವಿಶ್ವವಿದ್ಯಾಲಯಗಳಲ್ಲೂ ವಿಶೇಷ ಆಹ್ವಾನಿತರಾಗಿ ಹೋಗಿ ಉಪನ್ಯಾಸ ನೀಡಿದ್ದಾರೆ.

ಪದವಿ ಹಾಗೂ ಸ್ನಾತಕೋತ್ತರ ಪದವಿಯ ಅಧ್ಯಯನದ ಸಂದರ್ಭದಲ್ಲಿ ಅವರಿಗೆ ಗುರುಗಳಾಗಿದ್ದ ತೀ.ನಂ.ಶ್ರೀ., ಡಿ.ಎಲ್.ನರಸಿಂಹಾಚಾರ್, ತ.ಸು.ಶಾಮರಾಯರು, ಕೆ.ವೆಂಕಟ ರಾಮಪ್ಪ, ಎಸ್.ವಿ.ಪರಮೇಶ್ವರ ಭಟ್ಟರು, ಎಸ್.ಶ್ರೀಕಂಠಶಾಸ್ತ್ರಿ ಮುಂತಾದ ಮಹಾನ್ ವಿದ್ವಾಂಸರು,

ಇವರ ಮೇಲೆ ದಟ್ಟವಾದ ಪ್ರಭಾವ ಬೀರಿದರು. ಸಾಹಿತ್ಯಲೋಕದಲ್ಲಿ ಪ್ರಸಿದ್ಧರಾದ ಎಂ.ಎಚ್. ಕೃಷ್ಣಯ್ಯ, ಎನ್.ಎಸ್.ಲಕ್ಷ್ಮೀನಾರಾಯಣ ಭಟ್ಟ, ಎಚ್.ಜಿ. ಸಣ್ಣಗುಡ್ಡಯ್ಯ ಮೊದಲಾದವರು ಕಮಲಾ ಹಂಪನಾ ಅವರ ಸಹಪಾಠಿಗಳಾಗಿದ್ದರು. ಕಾಲೇಜು ದಿನಗಳಿಂದಲೇ ಸಹಪಾಠಿಗಳಾಗಿ ಪರಸ್ಪರ ಪರಿಚಯದೊಂದಿಗೆ, ಅರಿವಿಲ್ಲದಂತೆ ಮೂಡಿದ ಪ್ರೀತಿಯು ಗಟ್ಟಿಗೊಂಡ ಕಾರಣದಿಂದಾಗಿ ಡಾ.ಕಮಲಾ ಅವರು ಡಾ.ಎಚ್.ಪಿ.ನಾಗರಾಜಯ್ಯ(ಪ್ರೊ.ಹಂ.ಪ.ನಾ) ಅವರು ಬಾಳಸಂಗಾತಿಗಳಾದರು. ಅಂತರ್ಜಾತೀಯ ವಿವಾಹವು ಇದಾಗಿದ್ದರಿಂದ ಎದುರಾದ ಅಡ್ಡಿಆತಂಕಗಳು ಅಷ್ಟಿಷ್ಟಲ್ಲ. ಆದರೆ ಪ್ರೇಮಿಗಳಿಬ್ಬರು ಸಮಾನಾಸಕ್ತಿ, ಅಭಿರುಚಿಯುಳ್ಳವರು, ಸಾಹಿತ್ಯಾಸಕ್ತರು, ಸಾಹಿತ್ಯಬೋಧಕರು, ಕನ್ನಡ ಅಧ್ಯಾಪಕರು; ಇಬ್ಬರಲ್ಲಿಯೂ ನಿರಂತರವಾದ ಓದಿನ ಪ್ರೀತಿ–ಜೀವನ ಪ್ರೀತಿಗಳು ಒಂದಾಗಿದ್ದರಿಂದ ಆದರ್ಶ ದಂಪತಿಗಳಾದರು.

ವಿದ್ಯಾರ್ಥಿದೆಸೆಯಲ್ಲಿಯೇ ವಿದ್ವತ್ ಬಗೆಗೆ ಮೂಡಿಸಿಕೊಂಡ ಒಲವು ಮುಂದೆ ಅವರನ್ನು ಆ ದಿಕ್ಕಿನಲ್ಲಿ ಬಹು ಎತ್ತರಕ್ಕೆ ಕರೆದೊಯ್ಯಿತು. ಸೃಜನಶೀಲ ಸೃಜನೇತರ ಬರವಣಿಗೆಗಳೆರಡರಲ್ಲೂ ತಮ್ಮನ್ನು ತೊಡಗಿಸಿಕೊಂಡರೂ ಅವರ ಹೆಚ್ಚಿನ ಸಾಧನೆ ವಿದ್ವತ್ ಪ್ರಪಂಚಕ್ಕೆ ಸಂಬಂಧಿಸಿದ ಸಂಪಾದನೆ, ಸಂಶೋಧನೆ, ವಿಮರ್ಶೆಯಂತಹ ಶಿಸ್ತುಗಳಲ್ಲಿ ಡಿ.ಎಲ್.ಎನ್., ತೀ.ನಂ.ಶ್ರೀ., ಆ.ನೇ. ಉಪಾಧ್ಯೆ ಮುಂತಾದವರು ಅವರಿಗೆ ಆದರ್ಶವಾಗಿದ್ದುದರಿಂದ ಮತ್ತು ಅವರ ಪ್ರೋತ್ಸಾಹದಿಂದ ಈ ದಿಕ್ಕಿಗೆ ಹೊರಳಿದರು. ನಿರಂತರ ಅಧ್ಯಯನ ವ್ಯುತ್ಪತ್ತಿ, ಜ್ಞಾನ, ಸಹನೆ, ಸಂಯಮ, ಕೃತಿಯ ಒಳಹೊಕ್ಕು ನೋಡುವ ಅಂತರ್‌ದೃಷ್ಟಿ, ಔಚಿತ್ಯಪ್ರಜ್ಞೆ ನಿಷ್ಠುರ ಶಿಸ್ತು–ಇವೆಲ್ಲವೂ ಕಮಲಾ ಹಂಪನಾ ಅವರ ಸಾಹಿತ್ಯಕೃಷಿಯಲ್ಲಿ ಪ್ರಖರವಾಗಿ ಕಂಡುಬರುತ್ತವೆ. ಜೈನಧರ್ಮ, ಹಳಗನ್ನಡ, ಗ್ರಂಥ ಸಂಪಾದನೆ, ಜೀವನ ಚರಿತ್ರೆ, ಕಥೆ, ಕವನ, ವ್ಯಕ್ತಿಚಿತ್ರ ಮುಂತಾದ ಬಹು ವಿಷಯಗಳಿಗೆ ಸಂಬಂಧಿಸಿದಂತೆ ಇವರು ಕೃತಿರಚನೆ ಮಾಡಿದ್ದಾರೆ. ಅವರು ಬರೆದ ಐವತ್ತಕ್ಕೂ ಮೀರಿದ ಕೃತಿಗಳಲ್ಲಿ 'ಸುಕುಮಾರ ಚರಿತ್ರೆಯ ಸಂಗ್ರಹ', 'ಭರತೇಶ ವೈಭವ', 'ಶ್ರೀ ಪಚ್ಚೆ', 'ಕೆ.ಎಸ್. ಧರಣೇಂದ್ರಯ್ಯನವರ ಸ್ಮೃತಿ ಗ್ರಂಥ', 'ಸಹಸ್ರಾಭಿಷೇಕ', 'ಚಾವುಂಡರಾಯ ಪುರಾಣ', 'ಡಿ.ಎಲ್. ಎನ್. ಅವರ ಆಯ್ದಲೇಖನಗಳು', 'ಹಳೆಯ ಗದ್ಯ ಸಾಹಿತ್ಯ', 'ದಾನಚಿಂತಾಮಣಿ ಸ್ಮರಣ ಸಂಚಿಕೆ'. ಇವೆಲ್ಲವೂ ಮಹತ್ವದ ಸಂಪಾದಿತ ಕೃತಿಗಳಾಗಿವೆ.

1965ರಲ್ಲೇ ಪ್ರಕಟವಾದ 'ಸುಕುಮಾರ ಚರಿತ್ರೆಯ ಸಂಗ್ರಹ'ದಲ್ಲಿ ಸಂಪಾದನೆಯ ಕಾರ್ಯದಲ್ಲಿ ಎದುರಾಗುವ ಸಮಸ್ಯೆಯನ್ನು ತಾವು ಪರಿಹರಿಸಿಕೊಂಡ ರೀತಿಯನ್ನು ಸ್ಪಷ್ಟವಾಗಿ ವಿವರಿಸಿದ್ದಾರೆ. ಜನಸಾಮಾನ್ಯರಿಗೂ ಅರ್ಥವಾಗುವ ರೀತಿಯಲ್ಲಿ ಕಥಾಸಾರವನ್ನು ನೀಡಿದ್ದಾರೆ. ಅನಗತ್ಯವಾದ ಪದ್ಯಗಳನ್ನು ಕೈಬಿಟ್ಟು ಸುಸಂಬದ್ಧವಾಗಿ ಪದ್ಯಗಳನ್ನು ಆಯ್ಕೆಮಾಡಿದ್ದಾರೆ. ಜಿ.ಬ್ರಹ್ಮಪ್ಪನವರೊಡನೆ ಸಂಪಾದಿಸಿದ ಭರತೇಶ ವೈಭವಕ್ಕೆ 120 ಪುಟಗಳ ಸವಿಸ್ತಾರವಾದ ಕವಿ, ಕಾವ್ಯ ಪರಿಚಯ ನೀಡಿದ್ದಾರೆ.ಎಂ.ಎಚ್. ಕೃಷ್ಣಯ್ಯನವರೊಂದಿಗೆ ಸಂಪಾದಿಸಿದ ಹಳೆಯ ಗದ್ಯಸಾಹಿತ್ಯ ಹಲವು ಮುದ್ರಣಗಳನ್ನು ಕಂಡು ಬೆಂಗಳೂರು ವಿಶ್ವವಿದ್ಯಾಲಯದ ತೃತೀಯ ಪದವಿ ಐಚ್ಛಿಕ ವಿದ್ಯಾರ್ಥಿಗಳಿಗೆ ಪಠ್ಯವಾಗಿದ್ದು ಚರಿತ್ರಾರ್ಹವಾದುದು. ಕೆ.ಎಸ್.ಧರಣೇಂದ್ರಯ್ಯನವರ ಸ್ಮೃತಿ ಗ್ರಂಥದಲ್ಲಿ, ಕೆ.ಎಸ್.ಧರಣೇಂದ್ರಯ್ಯನವರ ಬಗ್ಗೆ ಅಭಿಮಾನಿಗಳು ಸ್ನೇಹಿತರು ಬರೆದ ಲೇಖನಗಳಿವೆ. ಧರಣೇಂದ್ರಯ್ಯನವರ ವ್ಯಕ್ತಿತ್ವದ ಹಲವು ಮುಖಗಳನ್ನು ಪರಿಚಯಿಸುವಂತಹ ಲೇಖನಗಳು ಅವರ ಹೃದಯ ವೈಶಾಲ್ಯ, ಸರ್ವಧರ್ಮ ಸಮನ್ವಯ ದೃಷ್ಟಿ, ಉದಾರತ್ವಗಳು ಬಿಂಬಿತವಾಗಿವೆ. ಈ ಸ್ಮರಣ ಸಂಚಿಕೆಯಲ್ಲಿ ಧರಣೇಂದ್ರಯ್ಯನವರೇ ಬರೆದ 'Ranna, the great Kannada Poet' ಎಂಬ ಲೇಖನವೂ ಸೇರಿರುವುದು ಇಲ್ಲಿನ ವಿಶೇಷ. 'ಸಹಸ್ರಾಭಿಷೇಕ' ಬೆಳ್ಗೊಳದ ಬಾಹುಬಲಿಯ ಸ್ಥಾಪನೆಯ ಸಾವಿರ ವರ್ಷದ ಸಂದರ್ಭಕ್ಕೆ ನಡೆದ ಮಹಾ ಮಸ್ತಕಾಭಿಷೇಕದ ಸಂಸ್ಮರಣೆಗಾಗಿ ಪ್ರಕಟವಾದ ಅಪೂರ್ವ ಸಂಚಿಕೆಯಾಗಿದೆ.

'ಅನೇಕಾಂತವಾದ'ವೂ ಜೈನಧರ್ಮಕ್ಕೆ ಸಂಬಂಧಿಸಿದ ಲೇಖನಗಳ ಸಂಗ್ರಹವಾಗಿದೆ. ಜೈನಧರ್ಮ, ತತ್ವ ವಿಚಾರ ಚಿಂತನೆಗಳೇ ಇಲ್ಲಿ ಪ್ರಮುಖವಾಗಿವೆ. ಜೈನಧರ್ಮ ಸಂಬಂಧಿ

ವ್ಯಕ್ತಿಗಳು, ವಿಚಾರಗಳು, ನೋಂಪಿಗಳು ಮುಂತಾದವುಗಳ ಬಗ್ಗೆ ಸಂಗ್ರಹಿಸಿದ ವಿವರಗಳನ್ನು ಅತ್ತಿಮಬ್ಬೆ, ಚಾವುಂಡರಾಯನ ಗುರುಗಳು, ಜೈನಧರ್ಮದಲ್ಲಿ ಕರ್ಮಸಿದ್ಧಾಂತ ಕಂತಿಯರು– ಹೀಗೆ ಹಲವಾರು ಲೇಖನಗಳ ಮೂಲಕ ನೀಡಿದ್ದಾರೆ. ಅತ್ಯಂತ ಕ್ಲಿಷ್ಟವಾದ ಶುಷ್ಕವಾದ ತಾತ್ವಿಕ ವಿಚಾರಗಳನ್ನು ಸಾಮಾನ್ಯರ ಅರಿವಿಗೂ ಸುಲಭವಾಗುವಂತಹ ಶೈಲಿಯಲ್ಲಿ ನೀಡುವ ಪ್ರಯತ್ನ ಮಾಡಿದ್ದಾರೆ.

'ತುರಂಗ ಭಾರತ' ಅವರ ಪಿಎಚ್.ಡಿ. ಪ್ರಬಂಧವಾಗಿದೆ. 18ನೇ ಶತಮಾನದಲ್ಲಿದ್ದ ಪರಮದೇವನ ಬೃಹತ್ ಕಾವ್ಯ 'ತುರಂಗ ಭಾರತ'. 96 ಸಂಧಿಗಳಲ್ಲಿರುವ 4824 ಪದ್ಯಗಳ ಈ ದೊಡ್ಡಕಾವ್ಯದ ಕರ್ತೃ ವಿಶಿಷ್ಟ ಕವಿ. ಜನಪ್ರಿಯ ಕವಿ ಎನಿಸಿಕೊಂಡಿದ್ದ ಈತನ ಕಾವ್ಯವೊಂದೇ ಮಹಾಭಾರತದ 18 ಪರ್ವಗಳನ್ನು ಒಳಗೊಂಡಿರುವಂತಹುದು. ಆದರೂ ಕನ್ನಡದ ಇಲ್ಲಿವರೆಗಿನ ಸಾಹಿತ್ಯ ಚರಿತ್ರೆಗಳಲ್ಲಿ ಎಲ್ಲಿಯೂ ಉಲ್ಲೇಖಗೊಳ್ಳದ ಕವಿಯ ಬಗ್ಗೆ ಮೂಡಿದ ಕುತೂಹಲವೇ ಈ ಪ್ರಬಂಧ ರಚನೆಗೆ ದಾರಿಯಾಯಿತು. ಐದು ಅಧ್ಯಾಯಗಳಲ್ಲಿ ಈ ಕಾವ್ಯದ ಸಮಗ್ರ ಅಧ್ಯಯನವಿದೆ. ಪಂಪಭಾರತ, ಕುಮಾರವ್ಯಾಸಭಾರತ, ಸದಾನಂದ ಭಾರತ ಮೊದಲಾದ ಇನ್ನೂ ಅನೇಕ ಭಾರತ ಕಾವ್ಯಗಳ ನಡುವಿನ ಪರಸ್ಪರ ಪ್ರಭಾವ ವ್ಯತ್ಯಾಸಗಳನ್ನು ಕಾಲ್ಪನಿಕ ದೃಷ್ಟಿಯಿಂದ ಗುರುತಿಸಿದ್ದಾರೆ. ಕಾವ್ಯವಸ್ತು, ಶೈಲಿ, ಛಂದಸ್ಸು,ವರ್ಣನಾ ಸಾಮರ್ಥ್ಯ–ಕವಿಯ ಸ್ವೋಪಜ್ಞತೆ ಮುಂತಾದವುಗಳನ್ನು ವಿವರಿಸುವಾಗಲೂ ತೌಲನಿಕ ದೃಷ್ಟಿಯೊಂದಿಗೇ ಸಾಗಿ ಕಮಲಾ ಹಂಪನಾ ಅವರು ಕೈಗೊಂಡ ಸಂಶೋಧನಯಾನವು ಮಹತ್ತರವಾದುದಾಗಿದೆ.

'ಮುಡಿಮಲ್ಲಿಗೆ' ಮತ್ತು 'ಆ ಮುಖ' ಎಂಬುವು ಕಮಲಾ ಹಂಪನಾ ಅವರು ಬರೆದಿರುವ ವ್ಯಕ್ತಿಚಿತ್ರಗಳಾಗಿವೆ. ಪ್ರಮುಖರೆನಿಸಿದ ವ್ಯಕ್ತಿಗಳ ಜೀವನ ವಿವರ, ಸಾಧನೆಗಳನ್ನು ಪರಿಚಯಿಸುವ ಉದ್ದೇಶದ ಹಿನ್ನೆಲೆಯಲ್ಲಿ ರಚಿತವಾಗಿವೆ. 1966–81ರವರೆಗಿನ ಲೇಖನಗಳು ಮುಡಿ ಮಲ್ಲಿಗೆಯಲ್ಲಿ ಸಂಕಲಿತವಾಗಿವೆ. ಇಲ್ಲಿನ ಹತ್ತು ಲೇಖನಗಳು ಮಹತ್ವದ ವ್ಯಕ್ತಿಗಳ ಜೀವನ ವಿವರ ಅವರ ಸಾಧನಗಳನ್ನು ಮುಕ್ತವಾಗಿ ವಿವರಿಸುತ್ತಾರೆ. ಗುರುಗಳಾದ ಡಿ.ಎಲ್.ಎನ್, ಕನ್ನಡ ಕಟ್ಟಿದ ಗಳಗನಾಥರು, ಪು.ತಿ.ನ., ತೆಂಕನಾಡ ಕೋಗಿಲೆ ಎನಿಸಿದ ರಾಧಮ್ಮ, ಮಾತೃಶ್ರೀ ರತ್ನಮ್ಮ, ಕಸ್ತೂರಿ ಬಾ ಮುಂತಾದವರನ್ನು ಸರಳವಾದ ಶೈಲಿಯಲ್ಲಿ ಪರಿಚಯಿಸಿದ್ದಾರೆ. 'ಆ ಮುಖ' ವ್ಯಕ್ತಿಚಿತ್ರಗಳ ಮಾದರಿಯಲ್ಲಿ ಆಧುನಿಕ ಕನ್ನಡದ ಖ್ಯಾತ ಸಾಹಿತಿಗಳ ಪತ್ನಿಯರ ವ್ಯಕ್ತಿಚಿತ್ರಣಗಳಿವೆ. ಗಂಡಂದಿರ ಸಾಹಿತ್ಯ ಸಾಧನೆಯ ಹಾದಿಯಲ್ಲಿ ಹೆಂಡತಿಯರ ಪಾತ್ರ, ಪ್ರಭಾವಗಳನ್ನು ತಿಳಿಯುವ ಉದ್ದೇಶದ ಹಿನ್ನಲೆಯಲ್ಲಿ ರಚಿತವಾದ ಇಲ್ಲಿನ ಲೇಖನಗಳು ಸಂದರ್ಶನದ ಮೂಲಕವಾಗಿ ಸಂಗ್ರಹಿಸಿದ ಮಾಹಿತಿಗಳನ್ನು ಒದಗಿಸುತ್ತವೆ. ಸಾಹಿತಿಗಳ ಕೌಟುಂಬಿಕ ವಿವರಗಳ ಜೊತೆಗೆ ಗಂಡ ಹೆಂಡತಿಯರ ಸಂಬಂಧ ಸ್ವರೂಪವೂ ಇವುಗಳ ಮೂಲಕ ಅನಾವರಣಗೊಳ್ಳುವಂಥವಾಗಿವೆ.

ಬೀಜಾಕ್ಷರ ಮಾಲೆ, ಜಾತಿ ನಿರ್ಮೂಲನೆ, ಭಾರತದಲ್ಲಿ ಜಾತಿಗಳು ಎಂಬುವು ಕಮಲಾ ಹಂಪನಾ ಅವರ ಅನುವಾದ ಕೃತಿಗಳಾಗಿವೆ. ಸರಸ್ವತಿಬಾಯಿ ಗಿರಿ ಅವರ ತೆಲುಗು ಕೃತಿಯಾದ 'ಬೀಜಾಕ್ಷರ ಮಾಲೆ'ಯನ್ನು ಅನುವಾದಿಸುವಲ್ಲಿ ಕಮಲಾ ಅವರು ಕನ್ನಡ ಭಾಷಾ ಜಾಯಮಾನಕ್ಕೆ ಹೊಂದುವಂತೆ ಮಾಡುವಲ್ಲಿ ಯಶಸ್ವಿಯಾಗಿದ್ದಾರೆ. ನೇರ ಅನುವಾದವಾಗದೆ ಭಾವಾನುವಾದದ ಪ್ರಯತ್ನವೇ ಎದ್ದು ತೋರುವುದರಿಂದ, ಸ್ವತಂತ್ರ ಕೃತಿ ಎಂಬಂತೆ ಕಾಣುತ್ತದೆ. ಇನ್ನುಳಿದೆರಡು ಕೃತಿಗಳು ಜಾತಿ ನಿರ್ಮೂಲನೆಗಾಗಿ ಹೋರಾಡಿ, ಶ್ರಮಿಸಿದ, ಭಾರತದ ಸಂವಿಧಾನ ಶಿಲ್ಪಿ ಎನಿಸಿಕೊಂಡ ಡಾ.ಬಿ.ಆರ್.ಅಂಬೇಡ್ಕರರ ಪುಸ್ತಕಗಳ ಭಾಷಾಂತರವಾಗಿದೆ.

ಸಮೂಹ ಮಾಧ್ಯಮಗಳಲ್ಲಿ ಒಂದಾದ ಆಕಾಶವಾಣಿಗಾಗಿಯೂ ಬರಹಗಳನ್ನು ಸಿದ್ಧಪಡಿಸಿ ಪ್ರಸ್ತುತಪಡಿಸಿದ ಕಮಲಾ ಅವರು ಮೂರು ಪ್ರಕಾರಗಳಲ್ಲಿ ಕೆಲಸ ಮಾಡಿದ್ದಾರೆ. ಅಲ್ಲಿ ಪ್ರಸಾರಗೊಂಡ ಚಿಂತನ ಭಾಷಣಗಳು, ರೂಪಕಗಳು, ನಾಟಕಗಳು, 'ಬೆಳ್ಳಕ್ಕಿ', 'ಬಾನಾಡಿ', 'ಬಕುಳ' ಎಂಬ ಸಂಕಲನಗಳಾಗಿ ಹೊರಬಂದಿವೆ. ಆಕಾಶವಾಣಿ ಮಾಧ್ಯಮಕ್ಕೆ ಬೇರೆಯೇ

ಆದ ಶಿಸ್ತು ಬೇಕಾಗುತ್ತದೆ. 'ಶ್ರವಣ'ವೇ ಮುಖ್ಯಭಾಗವಾದ್ದರಿಂದ ಎಲ್ಲ ವಿಚಾರಗಳೂ ಧ್ವನಿ ಮಾಧ್ಯಮದ ಮೂಲಕವೇ ಸಂವಹನಗೊಳ್ಳಬೇಕು. ಆದ್ದರಿಂದ ಇಲ್ಲಿನ ಬರವಣಿಗೆಗೆ ವಿಶೇಷಗಮನದ ಅಗತ್ಯವಿರುತ್ತದೆ. ಬೇರೆ ಬೇರೆ ಕಾಲಗಳಲ್ಲಿ, ಬೇರೆ ಬೇರೆ ಸಂದರ್ಭಗಳಿಗಾಗಿ ಬರೆದ ನಾಟಕಗಳಾಗಿವೆ. 'ಬಕುಳದಲ್ಲಿನ ನಾಲ್ಕು ನಾಟಕಗಳು 'ಜಗವೆಲ್ಲ ಮಲಗಿರಲು, 'ಕನಸು ನನಸಾಯಿತು, 'ಕುಲದ ನೆಲೆಯ ಬಲ್ಲಿರಾ', 'ಕಂತಿ–ಹಂಪ ನಾಟಕಗಳಾದರೆ 'ಬಾನಾಡಿ'ಯಲ್ಲಿ ಐದು ನಾಟಕಗಳಿವೆ. 'ಪ್ರಿಯದರ್ಶಿನಿ' (ಇಂದಿರಾಗಾಂಧಿಯನ್ನು ಕುರಿತದ್ದು) 'ಪಂಜೆಯವರು, 'ಜನ್ಮಾಭಿಷೇಕೋತ್ಸವ' (ಮಹಾವೀರ ಜಯಂತಿ ಸಂದರ್ಭಕ್ಕೆ) ರಜತ ರಾಜ್ಯೋತ್ಸವ', 'ಸಂಚಿಹೊನ್ನಮ್ಮ' ಚಿಂತನ ಭಾಷಣಗಳು. ಕೇವಲ ನಾಲ್ಕು ನಿಮಿಷಗಳ ಅವಧಿಗೆ ಅಳವಡುವಂತೆ ಸಿದ್ಧಪಡಿಸುವ ವಿಚಾರಗಳಾಗಿರುತ್ತವೆ. ವಿವಿಧ ವಿಷಯಗಳಾದ ಧರ್ಮ, ನೀತಿ, ಸ್ವಾತಂತ್ರ್ಯ, ಉಪಕಾರ, ಮಾನವತ್ವ, ಸಮಾನತೆ ಇತ್ಯಾದಿ ಹಲವಾರು ವಿಷಯಗಳನ್ನು ಕುರಿತ ಆಲೋಚನೆಗಳ ಚಿಂತನಗಳ ಸಂಗ್ರಹವಾಗಿದೆ. 'ಬೆಳ್ಳಕ್ಕಿ' ಮೂರು ತೆನೆಗಳಲ್ಲಿ ಹಂಚಿಕೊಂಡ ಈ ಕೃತಿ ಕ್ರಮವಾಗಿ ಚಿಂತನಗಳನ್ನು ವಿಮರ್ಶೆಗಳನ್ನು, ಭಾಷಣಗಳನ್ನು ಒಳಗೊಂಡಿದೆ.

ಕಮಲಾ ಹಂಪನಾ ಅವರ ಸಾಹಿತ್ಯರಾಶಿಗೆ ಸೇರುವ ಪ್ರಮುಖ ಕೃತಿಗಳಾದ ಬಾಸಿಂಗ, ಬಾಂದಳ, ಬಡಬಾಗ್ನಿ, ಬಿತ್ತರಗಳು ಅವರ ಪ್ರಬುದ್ಧ ಚಿಂತನೆ, ಆಲೋಚನೆಗಳನ್ನು ಬಿಂಬಿಸುವ ವೈಚಾರಿಕ, ವಿಮರ್ಶಾತ್ಮಕ ಲೇಖನಗಳ ಸಂಗ್ರಹಗಳಾಗಿವೆ. ವಿವಿಧ ಸಂದರ್ಭಗಳಿಗಾಗಿ ಸಿದ್ಧಪಡಿಸಿದ ಲೇಖನಗಳು, ಭಾಷಣಗಳು ಕೃತಿಗಳಾಗಿ ಹೊರಬಂದಿದೆ. ಅಲ್ಲದೆ ಸಾಹಿತ್ಯ ವಿದ್ಯಾರ್ಥಿಯಾಗಿ ನಿರಂತರವಾಗಿ ಕನ್ನಡ ಸಾಹಿತ್ಯಾಧ್ಯಯನದಲ್ಲಿ, ಸಾಹಿತ್ಯಾನುಸಂಧಾನದಲ್ಲಿ ತೊಡಗಿಸಿಕೊಂಡು ಕನ್ನಡ ಸಾಹಿತ್ಯದಲ್ಲಿ ಆಗುತ್ತಿರುವ ಸ್ಥಿತ್ಯಂತರಗಳನ್ನು, ಧೋರಣೆಗಳನ್ನು ಗಮನಿಸುತ್ತಾ ಆಯಾಕಾಲಕ್ಕೆ ಸಂದರ್ಭಗಳಿಗೆ ಅನುಗುಣವಾಗಿ ಸ್ಪಂದಿಸುತ್ತಾ ತಮ್ಮದೇ ಆದ ದೃಷ್ಟಿಕೋನವನ್ನು ಆಲೋಚನೆ, ಅಭಿಪ್ರಾಯಗಳನ್ನು ರೂಪಿಸಿಕೊಂಡು ಸಾಹಿತ್ಯದ ವಿವಿಧ ಮಗ್ಗಲುಗಳನ್ನು ಕುರಿತಾದ ತಮ್ಮ ನಿಲುವುಗಳನ್ನು ವಿಮರ್ಶಾ ಲೇಖನಗಳಲ್ಲಿ, ವೈಚಾರಿಕ ಲೇಖನಗಳಲ್ಲಿ ಮಂಡಿಸಿದ್ದಾರೆ. ಸಮಕಾಲೀನ ಸಾಹಿತ್ಯ, ಸಮಾಜ, ರಾಜಕೀಯ ಇತ್ಯಾದಿ ಸಮಸ್ಯೆಗಳ ಬಗೆಗಿನ ಪ್ರತಿಕ್ರಿಯೆ ಸ್ಪಂದನಗಳೇ ಅವರ ವೈಚಾರಿಕ, ವಿಮರ್ಶಾತ್ಮಕ ಲೇಖನಗಳಾಗಿ ಸಂಕಲಿತವಾಗಿವೆ.

ಕನ್ನಡ ಪುಸ್ತಕ ಪ್ರಾಧಿಕಾರದ ವತಿಯಿಂದ ಜನಪ್ರಿಯ ಪುಸ್ತಕಮಾಲೆಯಲ್ಲಿ ಪ್ರಕಟವಾದ 'ಬಿತ್ತರ' ಎಂಬುದು ಕಮಲಾ ಹಂಪನಾ ಅವರ ವಿದ್ವತ್ ದರ್ಶನಕ್ಕೆ ಸಾಕ್ಷೀಭೂತವಾಗಿದೆ. ಪ್ರಾಚೀನ ಕಾಲದಿಂದ ಇಂದಿನವರೆಗಿನ ಕನ್ನಡ ಕಾವ್ಯ ಕವಿಗಳ ಒಂದು ಸ್ಥೂಲ ಪರಿಚಯವನ್ನು ನೀಡಿದ್ದಾರೆ. ಐದು ವಿಭಾಗಗಳ ಅಡಿಯಲ್ಲಿ ಕುಮಾರವ್ಯಾಸ ಭಾರತ, ಜೈನಸಾಹಿತ್ಯ, ಜೈನಪುರಾಣ, ಕನಕದಾಸರ ಕೃತಿಗಳು, ಷಡಕ್ಷರದೇವ, ತೀ.ನಂ.ಶ್ರೀ. ಮತ್ತು ವ್ಯಾಕರಣ, ಹಾ.ಮಾ.ನಾಯಕ, ಎ.ಆರ್.ಕೃ, ಬೆಂಗಳೂರು ಸಾಹಿತಿಗಳು ಇತ್ಯಾದಿಯಾಗಿ ಕೃತಿ, ಕೃತಿಕಾರರ ಸಮೀಕ್ಷೆ ನಡೆಸಿದ್ದಾರೆ. ದಲಿತರ ಮಹಿಳೆಯರ ಸ್ಥಿತಿಗತಿಗಳ ಬಗ್ಗೆ ಹೇಳುವಾಗ ಚಾರಿತ್ರಿಕವಾಗಿ, ಹಂತಹಂತವಾಗಿ ಗುರುತಿಸುತ್ತಾರೆ. ದೇಶ, ಸಮಾಜ, ಸಂವಿಧಾನ, ಕಾನೂನುಗಳ ಬಗ್ಗೆಯಾಗಿ ಅರಿವನ್ನು ಮೂಡಿಸಿಕೊಂಡಿರುವುದ ರಿಂದಲೇ ವಿಷಯ ಪ್ರತಿಪಾದನೆ, ನಿರೂಪಣೆಗಳಿಗೆ ಒಂದು ಬಗೆಯ ಅಧಿಕೃತತೆ ಸಂದಿದೆ. ಬರವಣಿಗೆಯನ್ನು ನಿಯಂತ್ರಿಸಿಕೊಂಡು, ಕಾವು ಕೊಟ್ಟು ಬರೆದಲ್ಲಿ ಒಳನೋಟಗಳ ಪ್ರಬುದ್ಧ ಬರವಣಿಗೆ ಸಾಧ್ಯವಾಗುವುದು ಎಂಬುದಕ್ಕೆ ಈ ಗ್ರಂಥ ಮಹತ್ವದ ಉದಾಹರಣೆಯಾಗಿದೆ.

ಕಮಲಾ ಹಂಪನಾ ಅವರು ಅಧ್ಯಾಪನ, ಸಂಶೋಧನ, ಲೇಖನ, ಭಾಷಣಗಳ ಮೂಲಕ ಮಾಡಿರುವ ಸಾಹಿತ್ಯ ಸೇವೆಯನ್ನು ಗುರುತಿಸಿ ನಾಡಿನ ನಾನಾ ಸಂಘ ಸಂಸ್ಥೆಗಳಿಂದ ಅನೇಕ ಗೌರವ ಪ್ರಶಸ್ತಿಗಳು ದೊರೆತಿವೆ. ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ, ಬಾಬಾ ಆಮ್ಟೆ ರಾಷ್ಟ್ರೀಯ ಪ್ರಶಸ್ತಿ, ಸಾವಿತ್ರಮ್ಮ ದೇಜಗೌ ಪ್ರಶಸ್ತಿ, ದೇವೇಂದ್ರ ಕೀರ್ತಿ ಪ್ರಶಸ್ತಿ, ರನ್ನಕವಿ ಪ್ರಶಸ್ತಿ, ಶ್ರೀಮತಿ ರತ್ನಮ್ಮ ಹೆಗ್ಗಡೆ ಬಹುಮಾನ, 'ಸಾಹಿತ್ಯ ವಿಶಾರದೆ'

ಪ್ರಶಸ್ತಿ, ಐಬಿಟಿ ಮದರಾಸು ಕನ್ನಡ ಸಂಘದ ರಜತೋತ್ಸವ ಪುರಸ್ಕಾರ, ಶ್ರವಣಬೆಳಗೊಳದ ಮಹಾ ಮಸ್ತಕಾಭಿಷೇಕದ ರಾಷ್ಟ್ರೀಯ ಪುರಸ್ಕಾರ, ಶ್ರೀ ಗೋಮಟೇಶ್ವರ ವಿದ್ಯಾಪೀಠ ಪ್ರಶಸ್ತಿ, ದಾನಚಿಂತಾಮಣಿ ಅತ್ತಿಮಬ್ಬೆ ಪ್ರಶಸ್ತಿ, ಇತ್ಯಾದಿ ಪ್ರಶಸ್ತಿಗಳು ದೊರೆತಿವೆ. ಮೂಡಬಿದರೆಯಲ್ಲಿ ನಡೆದ 71ನೇ ಕನ್ನಡ ಸಾಹಿತ್ಯ ಸಮ್ಮೇಳನ (2003) ಅಧ್ಯಕ್ಷತೆ ವಹಿಸಿದ್ದರು. ಹೀಗೆ, ಕಮಲಾ ಹಂಪನಾ ಅವರು ಬದುಕಿನ ಎಲ್ಲ ರಂಗಗಳಲ್ಲಿ ಕೆಲಸ ಮಾಡಿದ ಇವರ ಸಾಧನೆ, ಗಳಿಸಿಕೊಂಡ ಪ್ರಶಸ್ತಿ ಪುರಸ್ಕಾರಗಳು ಅಸಂಖ್ಯ.

ರನ್ನ ಕವಿಗೆ ಆಶ್ರಯಕೊಟ್ಟು ಪೋಷಿಸಿದ ಅತ್ತಿಮಬ್ಬೆಯ ಬಗ್ಗೆ ಬೆಳೆಸಿಕೊಂಡ ಅಗಾಧ ಪ್ರೀತಿ, ಗೌರವ, ಭಕ್ತಿ, ಶ್ರದ್ಧೆಗಳು ಅತ್ತಿಮಬ್ಬೆಯ ಹೆಸರು ಎಲ್ಲೆಲ್ಲೂ ಕೇಳಿ ಬರುವಂತೆ ಶ್ರಮಿಸಿದ್ದಾರೆ. ಮೊಟ್ಟಮೊದಲಿಗೆ ಅತ್ತಮಬ್ಬೆಯ ಬಗ್ಗೆ ದನಿ ಎತ್ತಿ ಆಕೆಯ ಸಾಧನೆ, ಸಾಹಿತ್ಯ ಪ್ರೇಮಗಳನ್ನು ಗುರುತಿಸಿ ಆಕೆಯ ಹೆಸರಿನಲ್ಲಿ ಮಹಿಳೆಯರಿಗೆ ಸರ್ಕಾರದ ವತಿಯಿಂದ ಬಹುದೊಡ್ಡ ಮೊತ್ತದ ಪ್ರಶಸ್ತಿ ಗೌರವಗಳು ಸಲ್ಲುವಂತೆ ಮಾಡಿ ಆಕೆಯ ಹೆಸರನ್ನು ಚಿರಸ್ಥಾಯಿಗೊಳಿಸಿದ್ದಾರೆ. ಸಾಮಾಜಿಕ ಹಾಗೂ ಸಾಂಸ್ಕೃತಿಕ ಸಮಾನತೆಯ ವಿರುದ್ಧವಾದ ಸಮಸ್ಯೆಗಳ ಬಗ್ಗೆ ಗಂಭೀರ ಚಿಂತನೆ ನಡೆಸುತ್ತಾ ಬಂದಿರುವ ಕಮಲಾ ಹಂಪನಾ ಅವರು ಚಳುವಳಿಗಳಿಗೆ ಸಕ್ರಿಯವಾಗಿ ಸ್ಪಂದಿಸುವ ಸಹೃದಯಿಯಾಗಿದ್ದಾರೆ.

ಕಮಲಾ ಅವರ ಒಲವು ಹೆಚ್ಚಾಗಿ ಸಂಶೋಧನೆಯ ಕಡೆಗೇ ವಿಚಾರ ಸಂಕಿರಣ ಪ್ರಚಾರೋಪನ್ಯಾಸಗಳನ್ನು ನೀಡಬೇಕಾದ ಸಂದರ್ಭಗಳಿಂದ ಮತ್ತು ಸ್ವಪ್ರೇರಣೆಯಿಂದ ಕನ್ನಡ ಕವಿ–ಕಾವ್ಯ ಪರಂಪರೆಯ ಬಗೆಗೆ ಆಸಕ್ತಿ ಜಿಜ್ಞಾಸೆಗಳನ್ನು ಮೂಡಿಸಿಕೊಂಡು ಆಳವಾದ ಅಧ್ಯಯನದ ಪರಿಣಾಮವಾಗಿ ಮೈತಳೆದ ಸಂಶೋಧನೆ ಗ್ರಂಥಗಳಲ್ಲಿ, 'ಆದರ್ಶ ಜೈನ ಮಹಿಳೆಯರು' ಬಹುಮುಖ್ಯವಾದುದು. ಈ ಗ್ರಂಥವು ಸಮಗ್ರವಾಗಿ ರೂಪುಗೊಳ್ಳುವುದರ ಪೂರ್ವದಲ್ಲಿ ಬರೆದಿರುವ ಮಹತ್ವದ ಲೇಖನಗಳಲ್ಲಿ ಪ್ರಸ್ತುತ ಇಲ್ಲಿ ಆಯ್ದುಕೊಂಡಿರುವ 'ಜೈನ ದೃಷ್ಟಿಯಲ್ಲಿ ಸ್ತ್ರೀ' ಎಂಬುದು ರಚನೆಗೊಂಡಿದೆ. ಕನ್ನಡ ಜೈನ ಸಾಂಸ್ಕೃತಿಕ ಹಾಗೂ ಸಾರಸ್ವತ ಲೋಕದಲ್ಲಿ ಯಾರ ಗಮನಕ್ಕೂ ಬರದೆ ಅಜ್ಞಾತರಾಗಿ ಉಳಿದು ತಮ್ಮ ಶೌರ್ಯ, ಸಾಹಸ ತ್ಯಾಗ, ಬಲಿದಾನ, ಪ್ರತಿಭೆ, ದಾನಗುಣ ಇತ್ಯಾದಿಗಳಿಂದ ಆದರ್ಶಪ್ರಾಯರೆನಿಸಿಕೊಂಡ ಜೈನಮಹಿಳೆಯರಾದ ಕಾಳಲದೇವಿ, ಚಂಪಾದೇವಿ, ಅತ್ತಿಮಬ್ಬೆ ಮುಂತಾದವರನ್ನು ಪ್ರಾಕೃತ, ಸಂಸ್ಕೃತ, ಹಳಗನ್ನಡ ಕಾವ್ಯ, ಶಾಸನಗಳಿಂದ ಹೆಕ್ಕಿ ತೆಗೆದು ಅವರ ಉದಾತ್ತ ಚಿತ್ರಗಳನ್ನು ಕಮಲಾ ಹಂಪನಾ ಅವರು ಹೃದಯಸ್ಪರ್ಶಿಯಾಗಿ ಕಟ್ಟಿಕೊಟ್ಟಿದ್ದಾರೆ. ಜೈನಧರ್ಮದಲ್ಲಿ ಮಹಿಳೆಯ ರಿಗೆ ವಿಶೇಷ ಸ್ಥಾನವನ್ನು ಮಹತ್ವವನ್ನು ಕುರಿತು ಜೈನಪುರಾಣ, ಕಾವ್ಯ ಸಂದರ್ಭಗಳಿಂದ ವಿವರಿಸಿದ್ದಾರೆ. ಜೈನ ದಿಗಂಬರ ಸಂಪ್ರದಾಯದಲ್ಲಿ ಮಾನ್ಯವಾದ 'ಮಹಾಪುರಾಣ'ದಲ್ಲಿ ಸ್ತ್ರೀಯರ ವಿದ್ಯಾಭ್ಯಾಸಕ್ಕೆ ಒತ್ತುಕೊಟ್ಟಿರುವುದನ್ನು ಉದಾಹರಿಸುತ್ತಾರೆ. ಆದಿತೀರ್ಥಂಕರನಾದ ವೃಷಭದೇವನು ಗೃಹಸ್ಥನಾಗಿದ್ದಾಗ, ಗಂಡು ಮಕ್ಕಳಿಗೂ ಮೊದಲು ಹೆಣ್ಣು ಮಕ್ಕಳಿಗೆ ಅಕ್ಷರಾಭ್ಯಾಸ ಮಾಡಿಸುತ್ತಾ ನಿಮ್ಮ ಈ ಶರೀರವೂ ಈ ವಯಸ್ಸೂ ಅಸಮಾನವಾದ ಈ ಶೀಲವು ವಿದ್ಯೆಯಿಂದ ಅಲಂಕೃತವಾದರೆ ನಿಮ್ಮ ಈ ಜನ್ಮ ಸಫಲವಾಗುತ್ತದೆ. ವಿದ್ಯಾವತಿಯಾದ ಸ್ತ್ರೀಯೂ ಸ್ತ್ರೀ ಸೃಷ್ಟಿಯಲ್ಲಿ ಮೊದಲನೆ ಸ್ಥಾನವನ್ನು ಪಡೆಯುತ್ತಾಳೆ' ಎಂದು ಹೇಳಿದ ಮಾತುಗಳನ್ನು ಉದ್ಧರಿಸುತ್ತಾರೆ. ತಮ್ಮ ವಿಚಾರಗಳ ಸಮರ್ಥನೆಗೆ ಕಾವ್ಯ ಸಂದರ್ಭಗಳನ್ನು ಸೋದಾಹರಣವಾಗಿ ವಿವರಿಸುತ್ತಾರೆ. ಹೀಗೆ, ಜೈನಮಹಿಳೆಯರು ದಾನಿಗಳಾಗಿ, ಅನನ್ಯ ಪತಿಭಕ್ತೆಯರಾಗಿ, ಕಂತಿಯರಾಗಿ, ತ್ಯಾಗಿಗಳಾಗಿ ಆದ ರ್ಶ ಮಾತೆಯರಾಗಿ, ಮತೋದ್ಧಾರಕರಾಗಿ, ಮಹೋನ್ನತ ಗುಣಸಂಪನ್ನರಾಗಿ ಬಾಳಿ, ಲೋಕ ಬೆಳಗಿದ ಅಪೂರ್ವ ಸಂಗತಿಗಳನ್ನು ಸಂಶೋಧನಾತ್ಮಕವಾಗಿ ಪ್ರಸ್ತುತಪಡಿಸಿದ್ದಾರೆ.

ಜೈನಧರ್ಮ ಭಾರತದ ಪುರಾತನ ಧರ್ಮಗಳಲ್ಲೊಂದು. ಮಾನವ ಜನ್ಮಕ್ಕೆ ಜೈನಧರ್ಮ ಕೊಟ್ಟಷ್ಟು ಪ್ರಾಶಸ್ತ್ಯವನ್ನು ಜಗತ್ತಿನ ಮತ್ತಾವ ಧರ್ಮವೂ ಕೊಟ್ಟಿಲ್ಲ. ಮಾನವನ ಮಾತು ಹಾಗಿರಲಿ, ದೇವತೆಗಳೂ ಕೂಡ ಮುಕ್ತರಾಗಬೇಕಾದರೆ ಮಾನವರಾಗಿಯೇ ಹುಟ್ಟಬೇಕೆಂದು ಜಿನಧರ್ಮ ಸ್ಪಷ್ಟವಾಗಿ ಸಾರಿದೆ. ಮಾನವ, ಮುಕ್ತಿಯ ಮೊದಲ ಮೆಟ್ಟಿಲೆಂಬುದನ್ನು ಈ ಧರ್ಮ ದೃಢವಾಗಿ ನಂಬಿದೆ. ತೀರ್ಥಂ ಕರನಾಗಬೇಕಾದರೂ ಆತ ಮಾನವನ ಮೂಲಕವೇ ಹಾಯಬೇಕು.

ಹೀಗೆ ಮಾನವ ಜನ್ಮ ದೊಡ್ಡದೆಂದು ಲೋಕಕ್ಕೆ ಶ್ರುತಪಡಿಸಿದ ಈ ಜೈನ ಧರ್ಮದಲ್ಲಿ ಮಹಿಳೆಯರಿಗೆ ಕೊಟ್ಟಿರುವ ಸ್ಥಾನಮಾನಗಳು ಪರಿಭಾವನಾರ್ಹನಾದ ಗಹನ ವಿಚಾರವಾಗಿದೆ. ದಿಗಂಬರ ಹಾಗೂ ಶ್ವೇತಾಂಬರ ಎಂಬ ಎರಡು ಪ್ರಧಾನ ಜೈನಧರ್ಮದ ಶಾಖೆಗಳಿಂದ, ಕೆಲವು ಸ್ತ್ರೀ ಪಾತ್ರಗಳನ್ನು ಆರಿಸಿಕೊಂಡು ನನ್ನ ಈ ಲೇಖನವನ್ನು ನಿರೂಪಿಸಲು ತೊಡಗಿದ್ದೇನೆ.

ಜೈನಧರ್ಮದಲ್ಲಿ ಬಹಳ ಹಿಂದಿನಿಂದಲೂ ಮಹಿಳೆಯರಿಗೆ ವಿಶೇಷವಾದ ಮಹತ್ವವನ್ನೂ ಹೆಚ್ಚಿನ ಗೌರವವನ್ನೂ ಕೊಟ್ಟಿರುವುದು ಕಂಡುಬರುತ್ತದೆ. ಉದಾಹರಣೆಗಾಗಿ ಒಂದೆರಡನ್ನು ಉಲ್ಲೇಖಿಸಬಹುದು. ಬೆಂಕಿ, ಆಕಸ್ಮಿಕ, ಲೂಟಿ ಮತ್ತು ದರೋಡೆ ಮುಂತಾದ ಸಂದರ್ಭಗಳಲ್ಲಿ ಮೊಟ್ಟ ಮೊದಲು ಮಹಿಳೆಯರನ್ನು ರಕ್ಷಿಸಬೇಕೆಂದು ಜೈನ ಧಾರ್ಮಿಕ ಗ್ರಂಥಗಳಲ್ಲಿ ಹೇಳಿಕೆಗಳಿವೆ. ತೀರ್ಥಂಕರರ ತಾಯಂದಿರಿಗೆ ಹೆಚ್ಚಿನ ಗೌರವ ಸಂದಿದೆ. ಜಿನನ ಜನನಿಯರು ತಮ್ಮ ಚಿಕ್ಕ ಮಕ್ಕಳಾದ ತೀರ್ಥಂಕರನನ್ನು ತೊಡೆಯ ಮೇಲೆ ಕೂಡಿಸಿಕೊಂಡಿರುವ ಕಲ್ಲಿನ ವಿಗ್ರಹಗಳನ್ನು ದೇಶದ ಹಲವು ಕಡೆಗಳಲ್ಲಿ ಕಾಣಬಹುದು. ಇಂಥ ವಿಗ್ರಹಗಳನ್ನು ಪೂಜಿಸುವುದೂ ಉಂಟು. ಈಗಲೂ ಆಬು, ಗಿರಿನಾರ, ಪಾಟನ್ ಮೊದಲಾದ ಕೆಲವು ಸ್ಥಳಗಳಲ್ಲಿ ಈ ಜಿನ–ಜನನಿಯರ ಮೂರ್ತಿಗಳಿಗೆ ವಿಶೇಷ ಪೂಜೆ ನಡೆಯುತ್ತದೆಂದು ತಿಳಿದು ಬರುತ್ತದೆ.

ಜೈನ ದಿಗಂಬರ ಸಂಪ್ರದಾಯದಲ್ಲಿ 'ಮಹಾಪುರಾಣ' ಮಾನ್ಯವಾದ ಪ್ರಮಾಣ ಗ್ರಂಥ. ಅದರ ಆಧಾರದಿಂದ, ಪುರುಷರಿಗೆ ಹೇಗೋ ಹಾಗೆಯೇ ಸ್ತ್ರೀಯರಿಗೂ ಲೌಕಿಕ ವಿದ್ಯಾಭ್ಯಾಸವು ಅಗತ್ಯ ಎಂಬುದನ್ನು ಕಾಣಬಹುದು. ಮೊದಲನೆಯ ತೀರ್ಥ ಂಕರನಾದ ಋಷಭದೇವನು ಗೃಹಸ್ಥನಾಗಿದ್ದ ಕಾಲದಲ್ಲಿ, ತನ್ನ ಗಂಡುಮಕ್ಕಳಿಗೆ ವಿದ್ಯೆ ಕಲಿಸುವ ಮೊದಲು ತನ್ನ ಹೆಣ್ಣು ಮಕ್ಕಳಿಗೆ ತಾನೇ ಅಕ್ಷರಗಳನ್ನೂ, ಗಣಿತವನ್ನೂ ಹೇಳಿಕೊಟ್ಟನಂತೆ. ಇಬ್ಬರು ಹೆಣ್ಣು ಮಕ್ಕಳನ್ನು ಕರೆದು ತೊಡೆಯ ಮೇಲೆ ಕುಳ್ಳಿ ರಿಸಿಕೊಂಡು

**ಇದಂ ವಪುರ್ವಯಶ್ಚೇದವಿದಂ ಶೀಲಮನೀದೃಶಂ ।**
**ವಿದ್ಯಯಾ ಚೇದ್ವಿಭೂಷ್ಯೇತ ಸಫಲಂ ಜನ್ಮವಾಮಿದಂ ॥**
**ವಿದ್ಯಾನಾನ್ ಪುರುಷಲೋಕೆ ಸಮ್ಮತಿಂ ಯತಿಕೋವಿದೈಃ ।**
**ನಾರೀಚ ತದ್ವತೀ ಧತ್ತೇ ಸ್ತ್ರೀ ಸೃಷ್ಟೇರಗ್ರಿಮಾ ಪದಂ ॥**

"ನಿಮ್ಮ ಈ ಶರೀರವೂ ಈ ವಯಸ್ಸೂ ಅಸಮಾನನಾದ ಈ ಶೀಲವೂ ವಿದ್ಯೆಯಿಂದ ಅಲಂಕೃತವಾದರೆ ನಿಮ್ಮ ಈ ಜನ್ಮವು ಸಫಲವಾಗುತ್ತದೆ. ಲೋಕದಲ್ಲಿ ವಿದ್ಯಾವಂತನಾದ ಪುರುಷನು ವಿದ್ವಾಂಸರುಗಳಿಂದ ಸನ್ಮಾನ ಪಡೆಯುತ್ತಾನೆ. ಅವರಂತೆಯೇ ವಿದ್ಯಾವತಿಯಾದ ಸ್ತ್ರೀಯೂ ಸ್ತ್ರೀ ಸೃಷ್ಟಿಯಲ್ಲಿ ಮೊದಲನೆಯ ಸ್ಥಾನವನ್ನು ಪಡೆಯುತ್ತಾಳೆ."

**ವಿಭುಃ ಕರದ್ವಯೇನಾಭ್ಯಾಂ ಲಿಖನ್ನಕ್ಷರ ಮಾಲಿಕಾಂ ।**
**ಉಪಾದಿಶಲ್ಲಿಪಿಂ ಸಂಖ್ಯಾಸ್ಥಾನಂ ಚಾಂಕೈರನುಕ್ರಮಾತ್ ॥**

'ಪ್ರಭುವು (ಋಷಭನಾಥನು) ತನ್ನ ಎರಡು ಕೈಗಳಿಂದಲೂ ಅಕ್ಷರ ಮಾಲಿಕೆಯನ್ನು ಬರೆದು, ಆ ಮಕ್ಕಳಿಗೆ ಲಿಪಿಯನ್ನೂ, ಒಂದು ಎರಡು ಮೊದಲಾದ ಅಂಕಿಗಳಿಂದ, ಕ್ರಮನಾಗಿ ಸಂಖ್ಯಾಸ್ಥಾನವನ್ನೂ ಉಪದೇಶ ಮಾಡಿದನು. ಹೀಗೆ ಗುರುವಿನ ಅನು ಗ್ರಹದಿಂದ ವಿದ್ಯೆಗಳನ್ನು ನಿಃಶೇಷವಾಗಿ ವಶಪಡಿಸಿಕೊಂಡ ಆ ಇಬ್ಬರು ಕನ್ಯೆಯರೂ ಸರಸ್ವತಿಯ ಅವತಾರಕ್ಕೆ ಯೋಗ್ಯತೆಯನ್ನು ಪಡೆದರು.' ಹೀಗೆ ಋಷಭದೇವನು ತನ್ನ ನಲ್ಮೆಯ ಪುತ್ರಿಯರಾದ ಬ್ರಾಹ್ಮಿ ಮತ್ತು ಸುಂದರಿಯರಿಗೆ ಮೊದಲು ಲೌಕಿಕ ವಿದ್ಯೆಯನ್ನು ಹೇಳಿಕೊಟ್ಟು, ಆನಂತರ ಭರತ, ಬಾಹುಬಲಿ ಮೊದಲಾದ ಪುತ್ರರಿಗೆ ಇತರ ವಿದ್ಯೆಗಳನ್ನು ಹೇಳಿಕೊಡುತ್ತಾನೆ. ಇದು ಆದಿ ತೀರ್ಥಂ ಕರನು ಹೆಣ್ಣಿಗೆ ಕೊಟ್ಟ ಪ್ರಥಮ ಸ್ಥಾನ.

ಲೌಕಿಕವಾದ ವಿದ್ಯೆಗಳಲ್ಲಿ ಮಾತ್ರವಲ್ಲದೆ ಪಾರಲೌಕಿಕವಾದ ವಿದ್ಯೆಗಳಲ್ಲಿಯೂ ಸ್ತ್ರೀಗೆ ಪುರುಷನಂತೆಯೇ ಗಣ್ಯವಾದ ಸ್ಥಾನವುಂಟು ಎಬುದನ್ನು ತೀರ್ಥಂಕರನ 'ಸಮವಸರಣ' ಎಂಬ ಧರ್ಮಸಭೆಯ ವರ್ಣನೆಯಿಂದ ತಿಳಿಯಬಹುದು. ಆ ಮಂಟಪದ ಮೂರನೆಯ ಕೋಷ್ಠಕದಲ್ಲಿ ಆರ್ಯಿಕೆಯರು ಮತ್ತು ನರಸ್ತ್ರೀಯರು ಇರುತ್ತಾರೆ. ಇವರಲ್ಲಿ ಆರ್ಯಿಕೆಯರು ಸನ್ಯಾಸ ಧರ್ಮವನ್ನು ಆಚರಿಸುತ್ತಾರೆ. ಆದರೆ ಅವರು ಒಂದು ಮಟ್ಟದವರೆಗೆ ಮಾತ್ರ ಆಚರಿಸಬಹುದು. "ಸ್ವಭಾವದಿಂದ ಊರ್ಧ್ವ ಗಾಮಿಯಾದ ಜೀವ ತನ್ನ ಸಂಸಾರಾವಸ್ಥೆಯಿಂದ ಮುಕ್ತಿ ಪದವನ್ನು ಮುಟ್ಟಬೇಕಾದರೆ ಅದು ಹದಿನಾಲ್ಕು ಗುಣಸ್ಥಾನಗಳೆಂಬ ಮೆಟ್ಟಿಲುಗಳನ್ನು ಏರಿ ದಾಟಬೇಕು. ಆದರೆ ಸ್ತ್ರೀ ದೇಹವನ್ನು ಪಡೆದ ಜೀವ, ಆ ಸ್ತ್ರೀ ದೇಹಕ್ಕೆ ಸಂಬಂಧಿಸಿದ ಕೆಲವು ನೈಸರ್ಗಿಕ ಧರ್ಮಗಳಿಂದಾಗಿ, ತಾನು ಸಂಪೂರ್ಣ ದಿಗಂಬರಾಚಾರವನ್ನು ನಡೆಸಲಾರದು.

ಆದ್ದರಿಂದ ಇಂಥ ಜೀವ ಐದನೆಯ ಗುಣಸ್ಥಾನದಿಂದ ಆಚೆ ಏರಲಾರದು. ಆದ್ದರಿಂದಲೇ ಮಾಘಣಂದಿ ಆಚಾರ್ಯರು ತಮ್ಮ 'ಶಾಸ್ತ್ರ ಸಾರ ಸಮುಚ್ಚಯ' ಎಂಬ ಗ್ರಂಥದಲ್ಲಿ ಮೇಲಿನದನ್ನೆಲ್ಲ ಸ್ಪಷ್ಟಪಡಿಸಿ, ಸ್ತ್ರೀಯರಿಗೆ ಮೋಕ್ಷ ಸಾಧ್ಯವಾಗದೆಂದೂ ಸಹ ಹೇಳಿದ್ದಾರೆ. ಆದರೆ ಅನೇಕ ಸ್ತ್ರೀಯರು ಸನ್ಯಾಸ ಧರ್ಮವನ್ನು ಸ್ವೀಕರಿಸಿ ಸಲ್ಲೇಖನ ಮೊದಲಾದವುಗಳನ್ನು ಆಚರಿಸಿ ಸ್ವರ್ಗಾಗ್ರವನ್ನೇರಿದುದನ್ನು ನಾವು ಜೈನ ಸಾಹಿತ್ಯದಲ್ಲಿ ಕಾಣಬಹುದು. ಅಲ್ಲದೆ ಗಂಡಾಗಲಿ ಹೆಣ್ಣಾಗಲಿ, ಧರ್ಮದಲ್ಲಿ ಧರ್ಮದಂತೆ ಧರ್ಮದಿಂದ ನಡೆದವರನ್ನು ಆ ಧರ್ಮವೇ ರಕ್ಷಿಸುತ್ತದೆ ಎನ್ನುತ್ತದೆ ಜೈನಧರ್ಮ."

ದಿಗಂಬರ ಪಂಥದ ಪ್ರಕಾರ ಹೆಣ್ಣಿಗೆ ಮೋಕ್ಷ ಸಿದ್ಧಿಸದು ಎಂದು ಹೇಳಿದರೆ, ಶ್ವೇತಾಂಬರ ಪಂಥದ ಪ್ರಕಾರ ಅದೇ ಹೆಣ್ಣಿಗೆ ಮೋಕ್ಷ ಸಿದ್ಧಿಸಿದೆ, ಎಂದು ಹೇಳಿದ್ದಾರೆ. ಮೊದಲನೆಯ ತೀರ್ಥಂಕರನಾದ ಋಷಭನಾಥನು ಮುಕ್ತಿ ಪಡೆಯುವುದಕ್ಕೆ ಮೊದಲೇ ಆತನ ಕೇವಲ ಜ್ಞಾನೋತ್ಪತ್ತಿಯ ವೈಭವವನ್ನು ಕಂಡ ಮಾತ್ರದಿಂದಲೇ ಆತನ ತಾಯಿಯಾದ ಮರುದೇವಿ ತಾವೂ ಕೇವಲ ಜ್ಞಾನವನ್ನು ಪಡೆದು ಅದೇ ಕ್ಷಣದಲ್ಲಿಯೇ ದೇಹತ್ಯಾಗಮಾಡಿ, ಮುಕ್ತಿಯನ್ನು ಪಡೆದರೆಂದು ಶ್ವೇತಾಂಬರರ ತ್ರಿಷಷ್ಟಿ ಲಕ್ಷಣ ಮಹಾಪುರುಷ ಚರಿತವು ಕೊಂಡಾಡುತ್ತದೆ.

ಈ ಪಂಥದಲ್ಲಿ ಹತ್ತೊಂಬತ್ತನೆಯ ತೀರ್ಥಂಕರರು 'ಮಲ್ಲಿ' ಎಂಬ ಒಬ್ಬ ಹೆಣ್ಣು ಮಗಳು. ಹೆಣ್ಣಿಗೆ ಎಂಥ ಉಚ್ಚಸ್ಥಾನ ದೊರಕಿದೆ ಎನ್ನುವುದಕ್ಕೆ ಇದಕ್ಕಿಂತ ಬೇರೆ ನಿದರ್ಶನವಿಲ್ಲ. ತೀರ್ಥಂಕರತ್ವವನ್ನು ಪಡೆಯುತ್ತಿರುವ ಆ ಜೀವ ಹೆಣ್ಣು ಜೀವ. 'ಮಲ್ಲಿ' ಎಂಬ ಹೆಸರಿನ ರಾಜಕುಮಾರಿ. ಆಕೆಯ ಸೌಂದರ್ಯಕ್ಕೆ ಮರುಳಾಗಿ ದಂಡೆತ್ತಿ ಬಂದ ರಾಜಕುಮಾರರನ್ನು ಸಂದರ್ಶಿಸಿ, ಅವರಿಗೆ ದೇಹದ ನಶ್ವರತೆಯನ್ನು ಉಪದೇಶಿಸಿ, ತಾನೂ ಲೌಕಿಕದ ವಿಷಯದಿಂದ ಬಿಡುಗಡೆ ಹೊಂದಿ, ಅಜ್ಜಿಕೆಯಾದಳು. ಹಂತಹಂತವಾಗಿ ಸಿದ್ಧಿಯ ಮೆಟ್ಟಿಲನ್ನೇರಿ ತೀರ್ಥಂಕರತ್ವವನ್ನು ಪಡೆದಳು. ಜೈನ ಮಹಿಳೆಯ ಸಂಯಮ ಪೂರ್ಣವಾದ ಸ್ಥಿರ ಚಿತ್ರವನ್ನು ಇಲ್ಲಿ ಕಾಣಬಹುದು.

ದಿಗಂಬರ ಪಂಥದ ಪ್ರಕಾರ ಎಲ್ಲ ಸ್ತ್ರೀಯರಿಗೂ ಮೋಕ್ಷ ಉಂಟೆಂದು ವಾದಿಸುವುದಿಲ್ಲ. ಮುಕ್ತಿ ಕಷ್ಟ ಸಾಧ್ಯವಾದುದು. ಆದರೂ ಅದನ್ನು ಸ್ತ್ರೀಯರೂ ಸಾಧಿಸಬಲ್ಲರು ಎನ್ನುತ್ತಾರೆ. ಹೀಗೆ ಕಷ್ಟ ಸಾಧ್ಯವಾದುದನ್ನು ಸಾಧಿಸಿದವರಲ್ಲಿ ರಾಜೀಮತಿ ಪ್ರಸಿದ್ಧಳಾದವಳು. ಇಪ್ಪತ್ತೆರಡನೆಯ ತೀರ್ಥಂಕರನಾದ ನೇಮಿನಾಥ ಸ್ವಾಮಿಯನ್ನು ಆಕೆ ಮದುವೆಯಾಗಬೇಕಿತ್ತು. ಆದರೆ ಮದುವೆಗೆ ಹೋಗುತ್ತಿದ್ದಾಗಲೇ,

ನೇಮಿನಾಥನಿಗೆ ವೈರಾಗ್ಯ ಉದಯವಾಗಿ ಯತಿಯಾದನು. ರಾಜೀವತಿಗೂ ಇದರಿಂದ ವೈರಾಗ್ಯ ಹುಟ್ಟಿತು. ಆಕೆಯೂ ಅಜ್ಜಿಕೆಯಾಗಿ ತನ್ನ ಪತಿಯನ್ನು ಹಿಂಬಾಲಿಸಿ ತಪಸ್ಸಿನಲ್ಲಿ ತೊಡಗಿದಳು. ಅವರೀರ್ವರನ್ನೂ ಹಿಂಬಾಲಿಸಿ, ತಾನೂ ತಪಸ್ಸಿಗೆ ನಿಂತ ನೇಮಿನಾಥನ ತಮ್ಮ ರತ್ನ ನೇಮಿ, ಆತ್ಮನಿಗ್ರಹ ಸಾಲದೆ ಅತ್ತಿಗೆಯಲ್ಲಿ ಆಸಕ್ತನಾದನು. ಆಗ ರಾಜೀಮತಿ, ತನ್ನ ಮೈದುನನಿಗೆ ಧರ್ಮೋಪದೇಶಮಾಡಿ, ಆತನನ್ನು ತಿದ್ದಿದಳು. ತಾನೂ ಕಠಿಣ ತಪಸ್ಸು ಮಾಡಿ ಮೋಕ್ಷಗಳಿಸಿದಳು. ಜೈನ ಧಾರ್ಮಿಕ ಗ್ರಂಥವಾದ ಉತ್ತರಾಧ್ಯಯನ ಸೂತ್ರದಲ್ಲಿ "ರಾಜೀಮತಿ–ರತ್ನ ನೇಮಿ" ಪ್ರಸಂಗ ಒಂದು ಸುಂದರ ಜಾನಪದ ಗೀತೆಯೆನಿಸಿದೆ. ಇದು ರಾಜೀಮತಿಯ ಪ್ರಾತಿವ್ರತ್ಯದ ಪೆಂಪನ್ನೂ, ಪರಿಶುದ್ಧ ಶೀಲದ ಹಿರಿಮೆಯನ್ನೂ ತೋರಿಸುತ್ತದೆ.

ಜೈನಧರ್ಮ ಗೃಹಸ್ಥ–ಗೃಹಿಣೀ, ಸನ್ಯಾಸಿ–ಸನ್ಯಾಸಿನಿ ಈ ನಾಲ್ಕು ಗುಂಪಿಗೂ ಹೆಚ್ಚಿನ ಮಹತ್ವ ಕೊಟ್ಟಿರುವುದಲ್ಲದೆ ಈ ಚತುರ್ವರ್ಣವನ್ನೂ ಸರಿಸಮಾನವಾಗಿ ಕಂಡಿದೆ. ಮಹಾವೀರನ ಸಮಕಾಲೀನಳೂ ಆತನ ಚಿಕ್ಕಮ್ಮನೂ ಆದ ಚಂದನಬಾಲೆ ಮಹಾವೀರನ ಮೊಟ್ಟ ಮೊದಲ ಸ್ತ್ರೀ ಅನುಯಾಯಿಯಾದಳು. ಆಕೆ ತನ್ನ ನೇತೃತ್ವದಲ್ಲಿ ಮುವ್ವತ್ತಾರು ಸಾವಿರ ಆರ್ಯಿಕೆಯರ ಸಂಘವನ್ನು ಸ್ಥಾಪಿಸಿ ಜೈನಧರ್ಮ ಪ್ರಚಾರಕ್ಕೆ ಹೊಸ ಶಕ್ತಿಯನ್ನು ತುಂಬಿದಳು. ಈ ಆರ್ಯಿಕೆಯರು ಕೇಶವಿಚ್ಛೇದನವನ್ನು ಮಾಡಿಕೊಳ್ಳಬೇಕಿತ್ತು. ಇವರಿಗೆ ಜೈನ ಧರ್ಮ ನಗ್ನತೆಯನ್ನು ವಿಧಿಸಿಲ್ಲ. ಬಿಳಿಯ ಬಟ್ಟೆಗಳನ್ನು ಹಾಕಿಕೊಳ್ಳಬೇಕು. ಬಟ್ಟೆಗಳನ್ನು ಬಿಸಿಲಲ್ಲಿ ಒಣಗಿಸಬಹುದು. ಆದರೆ ನೀರಿನಲ್ಲಿ ಹಾಕಿ ಒಗೆಯಕೊಡದು ಎಂಬ ನಿಯಮಗಳಿದ್ದುವು. ಈ ಅಜ್ಜಿಕೆಯರಿಗೆ ಅನೇಕ ಶಿಷ್ಯ ಶಿಷ್ಯೆಯರಿದ್ದರು. ಬಹುಶಃ ಇವರಿಗೆ ಪ್ರತ್ಯೇಕ ಮಠಗಳಿದ್ದುವು. ವಿಕ್ರಮಪುರದ ಜಿನಾಲಯದಲ್ಲಿ ಅಜ್ಜಿಕೆಯರು ಇದ್ದಂತೆ ಶಾಸನಗಳಿಂದ ತಿಳಿದು ಬರುತ್ತದೆ. ತಮಿಳುನಾಡಿನಲ್ಲಿ ಕಂತಿಯರ ಸಂಘಗಳೇ ಇದ್ದು ಅನೇಕ ದೊಡ್ಡ ಮಠಗಳಿಗೆ ಪ್ರಧಾನಾಧಿಕಾರಿಗಳಾಗಿದ್ದರೆಂದು ತಿಳಿಯುತ್ತದೆ. ಕಂತಿ, ಆರ್ಯಿಕೆ. ಅಜ್ಜಿಕೆ, ಅಜ್ಜಿ, ಸನ್ಯಾಸಿನಿ, ಪರಿವ್ರಾಜಿಕೆ–ಹೀಗೆ ಜೈನ ಸನ್ಯಾಸಿನಿಯರನ್ನು ನಾನಾ ಪರ್ಯಾಯ ಶಬ್ದಗಳಿಂದ ಹೆಸರಿಸಿದ್ದಾರೆ. ಆದರೂ ಇವುಗಳಲ್ಲಿ ಕಂತಿ, ಅಜ್ಜಿಕೆ ಎಂಬುದೇ ಹೆಚ್ಚು ರೂಢಿಯಲ್ಲಿರುವ ರೂಪಗಳು. ಕೌಶಾಂಬಿಯ ದೊರೆ ಶತಾನೀಕನ ತಂಗಿಯಾದ ಜಯಂತಿ ಮಹಾವೀರನ ಉಪನ್ಯಾಸಗಳನ್ನು ಕೇಳುತ್ತಿದ್ದು ಆಧ್ಯಾತ್ಮಿಕ ಹಾಗೂ ಭೌತಿಕ ವಿಷಯಗಳನ್ನು ಚರ್ಚಿಸಿ, ತನ್ನ ರಾಜಭೋಗವನ್ನು ತ್ಯಜಿಸಿ ಅಜ್ಜಿಕೆಯಾದಳು.

ಹತ್ತನೆಯ ಶತಮಾನದ ಕನ್ನಡ ಗದ್ಯಗ್ರಂಥವಾದ ವಡ್ಡಾರಾಧನೆಯಲ್ಲಿ ಕಮಳಶ್ರೀ, ಬ್ರಹ್ಮಿಲೆ, ಗುಣಮತಿ, ಪ್ರಭಾವತಿ, ಸುದರ್ಶನ ಮೊದಲಾದ ಕಂತಿಯರ ಗುಣಗಾನವಿದೆ. ಸುಮಾರು ಕ್ರಿ.ಶ. 700ರಲ್ಲಿ ರಚಿತವಾದ ಶ್ರವಣಬೆಳುಗೊಳದ

ಶಾಸನ 26 ರಲ್ಲಿ ಸಸಿಮತಿಗಂತಿಯರು ಮುಡಿಸಿದ ವಿವರ ಹೀಗೆ ವರ್ಣಿತವಾಗಿದೆ:

**ನೆಱೆದಾಗ ವ್ರತ-ಶೀಲ-ನೋಂಪಿ ಗುಣದಿಂ ಸ್ವಾಧ್ಯಾಯ ಸಂಪತ್ತಿನಿಂ**
**ಕಱೆಯಿಲ್ ನಲ್‌ತಪಧರ್ಮದಾ ಸಸಿಮತಿ ಶ್ರೀಗಂತಿಯರ್ ವಂದುಮೇಲ್**
**ಅಱೆದಾಯುಷ್ಯಮನೆಂತು ನೋಡೆನಗೆ ತಾನಿಂತೆಂದು ಕಟ್ಟಿಪ್ಪಿನುಳ್**
**ತೊಱೆದಾರಧನೆನೋಂತು ತೀರ್ಥಗಿರಿಮೇಲ್ ಸ್ವರ್ಗಾಲಯಕ್ಕೇಱೆದಾರ್**

ಇದೇ ಶ್ರವಣಬೆಳುಗೊಳದ 351ನೆಯ ಶಾಸನದಲ್ಲಿ (ಕಾಲ 1109) ದಿವಾಕರಣಂದಿಯ ಶಿಷ್ಯ ಶ್ರೀಮತಿ ಗಂತಿಯರು ಸನ್ಯಸನ ವಿಧಿಯಿಂದ ಮುಡಿಸಿದರೆಂಬ ಸಂಗತಿಯನ್ನು ಸ್ವಾರಸ್ಯವಾಗಿ ನಿರೂಪಿಸಿದೆ:

**ಆಮುನಿ ದೀಕ್ಷೆಯಂ ಕುಡೆ ಸಮಗ್ರತಪೋನಿಧಿಯಾಗಿ ದಾನಚಿಂ**
**ತಾಮಣಿಯಾಗಿ ಸದ್ಗುಣಗಣಾಗ್ರಣಿಯಾಗಿ ದಯೂದಮ ಕ್ಷಮಾ ।**
**ಶ್ರೀಮುಖ ಲಕ್ಷ್ಮಿಯಾಗಿ ವಿನಯಾರ್ಣವ ಚಂದ್ರಿಕೆಯಾಗಿ ಸಂತತಂ**
**ಶ್ರೀಮತಿ ಗಂತಿಯರ್ ನೆಗಟ್ಟಿರುರ್ವಿಯೊಳುರ್ವರೆ ಕೂರ್ತುಕೀರ್ತಿಸಲ್ ॥**

ಅಂದಿನ ಜೈನ ಸಮಾಜದ ಮೇಲೆ ಯತಿಗಳಷ್ಟೇ ಈ ಸನ್ಯಾಸಿನಿಯರೂ ಗಾಢವಾದ ಪ್ರಭಾವವನ್ನು ಬೀರಿದರು; ಅವರ ವರ್ಚಸ್ವೀ ವ್ಯಕ್ತಿತ್ವ ಅನುಪಮವಾಗಿ ತ್ತು. ಜೈನ ಕಂತಿಯರಲ್ಲಿ ವಿದ್ಯೆ, ಬುದ್ಧಿವಂತಿಕೆ, ಪಾಂಡಿತ್ಯ, ಶೀಲಸಂವರ್ಧನೆ, ತ್ಯಾಗ ಮೊದಲಾದ ಉದಾತ್ತ ಗುಣಗಳಿಂದ ಶೋಭಿತರಾದ ಎಷ್ಟೋ ಜನರ ವಿವರ ಸಿಗುತ್ತದೆ. ಸ್ಥೂಲಭದ್ರನ ಏಳುಮಂದಿ ಸಹೋದರಿಯರಾದ ಯಕ್ಷ ಮೊದಲಾದವರು ಅದ್ಭುತ ಜ್ಞಾಪಕಶಕ್ತಿಯ ಕುರುಹಾಗಿದ್ದರು. ಕ್ರಿ.ಶ. 1ನೆಯ ಶತಮಾನದ ಆರ್ಯ ವ್ರಜನು ಆರು ವರುಷದ ಕಿಶೋರನಾಗಿರುವಾಗಲೇ ಜೈನ ಸನ್ಯಾಸಿಯರ ಬಳಿ ವಿದ್ಯಾಭ್ಯಾಸ ಮಾಡಿದನು. ಕಂತಿಯರ ಅನುಗ್ರಹದಿಂದ ಚೆನ್ನಾಗಿ ವಿದ್ಯೆ ಕಲಿತು ಹಿರಿಯ ವಿದ್ವಾಂಸನಾದನು.

ಆ ಸನ್ಯಾಸಿನಿಯರಲ್ಲೆಲ್ಲಾ ಯಾಕಿನಿ ಮಹತ್ತರಾ ಎಂಬವಳು ಮಹಾ ವಿದುಷಿ. ಹರಿಭದ್ರಸೂರಿ ಎಂಬ ಬ್ರಾಹ್ಮಣ ಪಂಡಿತನು ತನ್ನನ್ನು ವಾದದಲ್ಲಿ ಯಾರು ಸೋಲಿಸುವರೋ ಮತ್ತು ಯಾರ ಪ್ರವಚನವನ್ನು ಅರ್ಥಮಾಡಿಕೊಂಡು ವಿವರಿಸಲು ತನಗೆ ಅಸಾಧ್ಯವಾಗುವುದೋ ಅಂಥವರನ್ನು ತನ್ನ ಗುರುವೆಂದು ಒಪ್ಪಿಕೊಳ್ಳುವುದಾಗಿ ತಿಳಿಸಿದನು. ಜೈನ ಕಂತಿಯಾದ ಯಾಕಿನಿ ಮಹತ್ತರಾ ಅವನನ್ನು ವಾದದಲ್ಲಿ ಸೋಲಿಸಿ ಜೈನಧರ್ಮಕ್ಕೆ ಪರಿವರ್ತಿಸಿದಳು. ಭಾರತೀಯ ಸಾಹಿತ್ಯಕ್ಕೂ, ಜೈನ ಧರ್ಮಕ್ಕೂ, ದೊರೆತಿರುವ ಹರಿಭದ್ರಸೂರಿಯ ಕಾಣಿಕೆಯ ಮೌಲ್ಯವನ್ನು ಅರ್ಥಮಾಡಿಕೊಂಡರೆ, ಅಂತಹ ಘನ ಪಂಡಿತನನ್ನೂ ಸೋಲಿಸಿದ ಯಾಕಿನಿಯ ಪಾಂಡಿತ್ಯದ ಘನತೆಯನ್ನೂ ಔನ್ನತ್ಯವನ್ನೂ ಅರ್ಥಮಾಡಿಕೊಳ್ಳಲು ಸಾಧ್ಯವಾಗುತ್ತದೆ.

ಹರಿಭದ್ರಸೂರಿ ಸಂತೋಷದಿಂದ ಜೈನಧರ್ಮವನ್ನು ಸ್ವೀಕರಿಸಿದ್ದೇ ಅಲ್ಲದೆ ತನ್ನನ್ನು "ಯಾಕಿನಿ ಮಹತ್ತರಾಸೂನು" ಎಂದು ಕರೆದುಕೊಂಡಿದ್ದಾನೆ.

ಕ್ರಿ.ಶ. 905ರಲ್ಲಿ ಸರಸ್ವತೀ ಪ್ರತೀಕದಂತಿದ್ದ ಸಿದ್ಧರ್ಷಿಯು, 'ಉಪಮಿತಭವ ಪ್ರಪಂಚ ಕಥಾ' ಎಂಬ ಗ್ರಂಥವನ್ನು ಕುರಿತು ಉಪನ್ಯಾಸ ಮಾಡಿದಾಗ ಆ ಅಲಂಕಾರ ಗ್ರಂಥದ ಮೊಟ್ಟಮೊದಲ ಪ್ರತಿಯನ್ನು ಸಿದ್ಧಗೊಳಿಸಿದವಳು ಗುಣಸಾಧ್ವಿ ಎಂಬ ಜೈನಕಂತಿ. ಇದರಂತೆ ಕ್ರಿ.ಶ. 1118ರಲ್ಲಿ ಸಿದ್ಧರಾಜ ಜಯಸಿಂಹನ ಕಾಲದಲ್ಲಿ ಮಹಾನಂದ ಶ್ರೀ ಮಹತ್ತರಾ ಮತ್ತು ಗಣನಿವೀರಮತಿ ಎಂಬ ಇಬ್ಬರು ಕಂತಿಯರು ಜಿನಭದ್ರನ 'ವಿಶೇಷಾವಶ್ಯಕ ಭಾಷಾ' ಎಂಬ ಗ್ರಂಥಕ್ಕೆ ವಿವರವಾದ ಟೀಕೆಯನ್ನು ಬರೆಯಲು ಹೇಮಚಂದ್ರನಿಗೆ ಬಹುವಾಗಿ ಸಹಾಯಮಾಡಿದರು. ಕ್ರಿ.ಶ. 1150 ರಲ್ಲಿ ಗುಣಸಮೃದ್ಧಿ ಮಹತ್ತರಾ ಎಂಬ ಕಂತಿ 'ಅಂಜನ ಸುಂದರಿ ಚರಿತ್ರ' ಎಂಬ ಪ್ರಾಕೃತ ಗ್ರಂಥವನ್ನು ರಚಿಸಿದಳು.

ಈವರೆಗೂ ಅಜ್ಜಿಕೆಯರಲ್ಲಿ ಕೆಲವರ, ಹಿರಿಯ ವ್ಯಕ್ತಿತ್ವವನ್ನು ಸ್ಥೂಲವಾಗಿ ಪರಿಶೀಲಿಸಿದ್ದಾಯಿತು. ಇನ್ನು ಮುಂದೆ ಶ್ರಾವಿಕೆಯರಾಗಿ ದಿನನಿತ್ಯ ಜೀವನದಲ್ಲಿ ತಮ್ಮ ಅಮೂಲ್ಯ ಗುಣ–ಶೀಲಗಳಿಂದ ತಮ್ಮ ಹೆಸರನ್ನು ಶಾಶ್ವತಗೊಳಿಸಿಕೊಂಡಿರುವ ಕೆಲವರನ್ನು ಪರಿಚಯಿಸಿಕೊಳ್ಳಬಹುದು. ಕ್ರಿ.ಶ. ಎರಡನೆಯ ಶತಮಾನದ 'ಶಿಲಪ್ಪದಿಗಾರಂ' ಎಂಬ ತಮಿಳು ಕಾವ್ಯದಲ್ಲಿ ಸ್ತ್ರೀಯರ ಪಾತಿವ್ರತ್ಯದ ಹಿರಿಯ ಉಹಾಹರಣೆಯಾಗಿ ಕೆಲವು ಕತೆಗಳನ್ನು ಕೊಟ್ಟಿದೆ. ಅವುಗಳಲ್ಲಿ ದಕ್ಷಿಣ ಭಾಗದ ಸ್ತ್ರೀಯರ ಕತೆಗಳಲ್ಲಿ ಕನ್ನಗಿಯ ಕತೆ ಬರುತ್ತದೆ. ಈ ಕತೆ ಜೈನ ಸ್ತ್ರೀಯ ಆಕಳಂಕ ಪತಿಭಕ್ತಿ ಮತ್ತು ಪತಿನಿಷ್ಠೆಯನ್ನು ಸಾರುವುದಾಗಿದೆ. ಇಂದಿಗೂ ಆಕೆಯನ್ನು ತಮಿಳರು ಪತಿವೃತಾದೇವಿಯೆಂದು ಪೂಜಿಸುತ್ತಾರೆ. ಸಿಲೋನಿನಲ್ಲಿ 'ಪತ್ತಿನಿದೇವಿ' ಎಂಬ ಹೆಸ ರಿನಿಂದ ಪೂಜೆಯನ್ನು ಇಂದಿಗೂ ಸ್ವೀಕರಿಸುತ್ತಿದ್ದಾಳೆ.

ರಾಜತಂತ್ರ ನಿಪುಣೆಯರನ್ನೂ, ವೀರಮಹಿಳೆಯರನ್ನೂ ಜೈನಧರ್ಮ ಒಳಗೊಂಡಿದೆ. ಶೀಲಸಂಪನ್ನೆಯೂ ರಾಜತಂತ್ರಜ್ಞಳೂ ಆದ ಮೃಗವತಿಯ ಪೌರುಷ ಮೆಚ್ಚುವಂತದ್ದಾಗಿದೆ. ಉಜ್ಜಯಿನಿಯ ದೊರೆಯಾದ ಪ್ರದ್ಯೋತನು ಮೃಗವತಿಯನ್ನು ಅಪಹರಿಸಲು ಕೌಶಾಂಬಿಯನ್ನು ಮುತ್ತಿಗೆ ಹಾಕಿದನು. ಯುದ್ಧ ನಡೆಯುತ್ತಿದ್ದಾಗ ಮೃಗವತಿಯ ಪತಿ ಶತಾನೀಕ ಖಾಯಿಲೆಯಿಂದಾಗಿ ಮರಣಹೊಂದಿದನು. ಆದರೆ ಆಗ ರಾಜತಂತ್ರ ಚತುರೆಯಾದ ಮೃಗವತಿ ಪತಿಯನ್ನು ಕಳೆದುಕೊಂಡ ದುಃಖವನ್ನು ನುಂಗಿಕೊಂಡು ದೂರದೃಷ್ಟಿಯಿಂದ ರಾಜ್ಯದ ದೊರೆ ಅನಾರೋಗ್ಯದಿಂದ ಇರುವನೆಂದು ಮಾತ್ರ ಸುದ್ದಿ ಹಬ್ಬಿಸಿ, ತಾನೇ ಸೈನ್ಯದ ಮುಂದಾಳಾಗಿ ನಿಂತು,

ಪ್ರದ್ಯೋತನನ್ನು ಗಡಿಯಿಂದ ಆಚೆಗೆ ಓಡಿಸಿದ ತರುವಾಯ ರಾಜ ಸತ್ತ ಸುದ್ದಿಯನ್ನು ಜನತೆಗೆ ತಿಳಿಸಿದಳು. ಆದರೆ ಆ ವೇಳೆಗೆ ಸೈನಿಕರಿಗೆ ಬಹಳ ಆಯಾಸವಾಗಿದ್ದುದರಿಂದ ತಮ್ಮ ಮೇಲೆ ನುಗ್ಗಿ ಬರುತ್ತಿದ್ದ ಪ್ರದ್ಯೋತನ ಸೈನ್ಯವನ್ನು ತಡೆಯಲಾಗಲಿಲ್ಲ. ಆಗಲೂ ಮೃಗವತಿ ತುಂಬ ಕುಶಲತೆಯಿಂದ ತನ್ನ ರಾಜಧಾನಿಯ ಸುತ್ತ ಬಲವಾದ ಕೋಟೆಯನ್ನು ಕಟ್ಟಿ ತನ್ನ ಮಗನಿಗೆ ರಾಜ್ಯಪಟ್ಟವನ್ನು ಕಟ್ಟಿದರೆ, ಆಗ ತಾನು ಪ್ರದ್ಯೋತನ ಅಂತಃಪುರವನ್ನು ಪ್ರವೇಶಿಸುವುದಾಗಿ ಹೇಳಿಕಳುಹಿಸಿದಳು. ಆ ಒಪ್ಪಂದವಾದ ಮೇಲೆ ಅವಳು ಮಹಾವೀರನ ಸಭಾಮಂಟಪಕ್ಕೆ ಬಂದು, ಅಲ್ಲಿ ಕುಳಿತಿದ್ದ ಪ್ರದ್ಯೋತನ ಅಪ್ಪಣೆ ಪಡೆದು ಸನ್ಯಾಸಿನಿಯಾದಳು. ಪ್ರದ್ಯೋತನೂ ಮಹಾವೀರನ ಉಪದೇಶದ ಪ್ರಭಾವದಿಂದ ಪವಿತ್ರಾಂತಃಕರಣನಾಗಿ ತನ್ನ ಅಂತಃಪುರದ ಇನ್ನೂ ಹಲವು ಸ್ತ್ರೀಯರಿಗೆ ಮಹಾವೀರನಿಂದ ದೀಕ್ಷೆ ಕೊಡಿಸಿದನು.

ಕನ್ನಡನಾಡಿನಲ್ಲಿ ಜಿನಶಾಸನ ದೇವತೆಗಳಂತೆ ಬಾಳಿದ ಸಾವಿಯಬ್ಬೆ, ಜಕ್ಕಿಯಬ್ಬೆ, ಅಬ್ಬಕ್ಕದೇವಿ ಮೊದಲಾದ ಜೈನಸ್ತ್ರೀಯರ ಜೀವನವೂ ಮೃಗಪತಿಯ ಜೀವನದಂತೆ ಉದ್ಬೋಧವಾಗಿದೆ. ಲೋಕವಿದ್ಯಾಧರನ ಮಡದಿಯಾದ ಸಾವಿಯಬ್ಬೆ ಪತಿಗೆ ಸಹಕರಿಸಿ, ಸಾಹಸದಿಂದ ರಣರಂಗದಲ್ಲಿ ಶತ್ರುಗಳೊಡನೆ ಹೋರಾಡಿ ವೀರಸ್ವರ್ಗವನ್ನು ಪಡೆದ ಸಂಗತಿಯನ್ನು ಕನ್ನಡನಾಡಿನ ಶಾಸನಗಳು ಹೆಮ್ಮೆಯಿಂದ ಸಾರಿವೆ:

**ಶ್ರಾವಕ ಧರ್ಮದೊಳ್ ದೊರೆಯೆನಲ್ ಪೆಱರಿಲ್ಲೆನೆ ಸಂದ ರೇವತೀ**
**ಶ್ರಾವಕೀ ತಾನೆ ಸಜ್ಜನಿಕೆಯೊಳ್ ಜನಕಾತ್ಮಜೆ ತಾನೆ ರೂಪಿನೊಳ್ ।**
**ದೇವಕಿ ತಾನೆ ಪೆಂಪಿನೊಳರುಂಧರೆ ತಾನೆ ಜಿನೇಂದ್ರ ಭಕ್ತಿ ಸ**
**ದ್ಭಾವದೆ ಸಾವಿಯಬ್ಬೆ ಜಿನಶಾಸನ ದೇವತೆ ತಾನೆ ಕಾಣಿರೆ ॥**

ರಾಷ್ಟ್ರಕೂಟರ ದೊರೆ ಎರಡನೆಯ ಕೃಷ್ಣನ ಕಾಲದಲ್ಲಿ ನಾಗರಖಂಡ ಎಪ್ಪತ್ತಕ್ಕೆ 'ನಾಳ್ಗಾವುಂಡ'ನಾಗಿ ಆಳುತ್ತಿದ್ದ ನಾಗಾರ್ಜುನನು ಕಾಲಾತೀತನಾಗಲು ಆತನ ಪತ್ನಿಯು 'ನಾಳ್ಗಾವುಂಡ' ಪದವಿಯನ್ನು ಸ್ವೀಕರಿಸಿ ಬಹು ಸಾಮರ್ಥ್ಯದಿಂದ ರಾಜ್ಯಭಾರ ಮಾಡಿದಳು. ಚೆಲುವೆಯೂ ಧೀರೆಯೂ ಆದ ಅವಳ ಸಾಮರ್ಥ್ಯವನ್ನು ವರ್ಣಿಸುವ ಪದ್ಯ ಹೀಗಿದೆ: 'ಉತ್ತಮ ಪ್ರಭುಶಕ್ತಿಯುಕ್ತೆ ಜಿನೇಂದ್ರ ಶಾಸನ ಭಕ್ತೆ ಕಾಂತ್ಯಾತ್ತ ವಿಭ್ರಮೆ ಜಕ್ಕಿಯಬ್ಬೆ ಸಮಂತು ನಾಗರಖಂಡಮೆಪ್ಪತ್ತುಮಂ ವಧುವಾಗಿಯುಂ, ನಿಜವೀರ ವಿಕ್ರಮಗರ್ಭದಿಂ ಪತ್ತನಂ ಪ್ರತಿಪಾಲಿಸುತೊಸದಿಟ್ಟಳ್...." ಈಕೆಯು ಸ್ತ್ರೀಯಾಗಿದ್ದರೂ ಬಹು ಧೈರ್ಯದಿಂದ ನಾಡನ್ನು ಆಳಿದಳೆಂದು ಶಾಸನವು ಹೊಗಳುತ್ತದೆ. ಕಡೆಗೆ ಅವಳು ಈ ಪ್ರಾಪಂಚಿಕ ಸುಖದಿಂದ ವಿಮುಖಳಾಗಿ ಸಲ್ಲೇಖನ ವ್ರತವನ್ನು ಸ್ವೀಕರಿಸಿದಳು.

ವಿದೇಶೀಯರಾದ ಪೋರ್ಚುಗೀಸರನ್ನು ಹೊಡೆದೋಡಿಸಲೆತ್ನಿಸಿದ

16ನೆಯ ಶತಮಾನದ ರಾಣಿ ಅಬ್ಬಕ್ಕ ದೇವಿ ಚೌಟರ ಚಿಗುರು, ಜೈನದೊರೆಯ ಮಡದಿ ಎಂಬುದನ್ನು ನೆನಸಿಕೊಂಡರೆ ರೋಮಾಂಚನವಾಗುತ್ತದೆ. ಹೀಗೆ ಜೈನ ಸಾಮಂತ ಮಹಿಳಾ ಶಾಸಕಿಯರಲ್ಲಿ ಬಂಗ ವಂಶದಲ್ಲಿ ಶಂಕರದೇವಿ (1324–1349), ತಿರುಮಲಾದೇವಿ (1582–1606) ಮತ್ತು ಬೈಲಂಗಡಿ ಮೂಲರ ವಂಶದಲ್ಲಿ ಸೋಮಲಾದೇವಿ ಮೊದಲಾದ ಜೈನ ಮಹಿಳೆಯರು ತುಂಬ ಪ್ರಸಿದ್ದರು.

ಶಿವಮೊಗ್ಗ ಜಿಲ್ಲೆಯ ಹೊಂಬುಜವೆಂಬ ಸುಪ್ರಸಿದ್ಧ ಜೈನಕ್ಷೇತ್ರವನ್ನು ಸ್ಥಾಪಿಸಿದ ಜಿನದತ್ತರಾಯನ ವಂಶದವರು ಹಿರಣ್ಯಗರ್ಭನೆಂಬುವನ ಕಾಲದಲ್ಲಿ ಈಗಿನ ತೀರ್ಥ ಹಳ್ಳಿ ತಾಲ್ಲೂಕಿನ ಸಾಂತಳಿಗೆ ಎಂಬ ಪ್ರದೇಶವನ್ನು ವಶಪಡಿಸಿಕೊಂಡರು. ಅದ ರಿಂದ ಮುಂದೆ ಆ ವಂಶದವರಿಗೆ ಸಾಂತರ ವಂಶವೆಂದು ಹೆಸರು ಬಂದಿತು. ಈ ಹೆಸರಾಂತ ಸಾಂತರ ವಂಶದಲ್ಲಿ ಚಾಕಲದೇವಿ, ಕಾಲಳಾದೇವಿ ಮುಂತಾದ ಹಲವು ಜನ ವೀರ ಮಹಿಳೆಯರು ರಾಜ್ಯಭಾರ ಮಾಡಿದರು. ತುಂಬ ದಕ್ಷತೆಯಿಂದಲೇ ಈ ಜೈನ ಮಹಿಳೆಯರು ಆಳಿದುದಾಗಿ ಪ್ರತೀತಿಯಿದೆ. ಸಾಂತರವಂಶದ ಜೈನ ಸ್ತ್ರೀಯರು ರಾಜನೀತಿಯಲ್ಲಿ, ಸಾಹಿತ್ಯ ಸೇವೆಯಲ್ಲಿ ಸಾಕಷ್ಟು ಸುಪ್ರಸಿದ್ದರು. ಅದರಲ್ಲಿಯೂ ವಿಶೇಷವಾಗಿ ವಿಕ್ರಮ ಸಾಂತರನ ಮಗಳಾದ ಚಂಪಾದೇವಿ ಎಂಬಾಕೆ ಪರಮಪಂಡಿತೆಯಾಗಿದ್ದಳೆಂದು ತಿಳಿದುಬರುತ್ತದೆ. ಅವಳಿಗೆ 'ಶಾಸನದೇವತೆ' ಎಂಬ ಬಿರುದೂ ಬಂದಿತ್ತು.

ತಾಯಿಯಾದವಳಿಗೆ ತನ್ನ ಮಗುವನ್ನು ತ್ಯಾಗಮಾಡುವುದು ಸುಲಭವಲ್ಲ. ಆದರೆ ಜೈನ ಮಹಿಳೆಯರು ಎಂಥ ತ್ಯಾಗಕ್ಕೂ ಸಿದ್ಧ. ಪಾಹಿನಿಯದು ಮಹಾತ್ಯಾಗ ಮಾಡಿದ ಉದಾತ್ತ ಪಾತ್ರ. ಜೈನಧರ್ಮದ ಗುರುವಾದ ಆಚಾರ್ಯ ಹೇಮಚಂದ್ರಾಚಾರ್ಯನನ್ನು ಪಾಹಿನಿ ಉದಾರವಾಗಿ ತ್ಯಾಗಮಾಡದಿದ್ದರೆ ಭಾರತಕ್ಕೆ ಅಂಥ ಒಬ್ಬ ವಿದ್ವಾಂಸ ತಪ್ಪಿ ಹೋಗುತ್ತಿದ್ದ.

ಉಳಿದ ಎಲ್ಲ ಧರ್ಮಗಳಿಗಿಂತ ಹೆಚ್ಚಾಗಿಯೇ ಜೈನಧರ್ಮ ಸ್ತ್ರೀಯರಿಂದ ಉಪಕೃತವಾಗಿದೆ. ಪೋಚಿಕಬ್ಬೆ ಎನ್ನುವವಳು ತನ್ನ ಸಮಸ್ತವನ್ನೂ ಜೈನಧರ್ಮಕ್ಕೆ ಮೀಸಲಿಟ್ಟು ಹಲವಾರು ಜಿನಾಲಯಗಳನ್ನು ಮಾಡಿಸಿದಳು. ಅವಳ ಸಲ್ಲೇಖನ ವ್ರತವನ್ನು ನಿರೂಪಿಸುವುದು ರೋಮಾಂಚನವನ್ನು ತರುತ್ತದೆಂದು ಶಾಸನವು ವರ್ಣಿಸುತ್ತದೆ. ಅವರಲ್ಲಿ ಹಲವರು ಬಹು ಉದಾರಬುದ್ದಿಯುಳ್ಳವರಾಗಿದ್ದರು. ಚಾಗಲ ದೇವಿ ಎಂಬಾಕೆಯು ಸ್ವತಃ ಜೈನಳಾಗಿದ್ದರೂ ಬಳ್ಳಿಗಾವೆಯಲ್ಲಿ ಚಾಗೇಶ್ವರವೆಂಬ ಶಿವಾಲಯವನ್ನು ಕಟ್ಟಿಸಿ ಹಲವಾರು ಬ್ರಾಹ್ಮಣರಿಗೆ ಕನ್ಯಾದಾನ ಮೊದಲಾದ ದಾನಗಳನ್ನು ಮಾಡಿದಳೆಂದು ತಿಳಿಯುತ್ತದೆ.

ಬಸದಿ, ಕೆರೆ, ಕಟ್ಟೆ, ಕಲ್ಯಾಣಿಗಳನ್ನು ಕಟ್ಟಿಸುವುದು ಇಲ್ಲವೆ ಜೀರ್ಣೋದ್ಧಾರ ಮಾಡುವುದು, ಕವಿಗಳಿಗೆ ಆಶ್ರಯವಿತ್ತು ಮಹಾಕಾವ್ಯಗಳನ್ನು ಬರೆಸುವುದು, ಇಲ್ಲವೆ ಪ್ರತಿ ಮಾಡಿಸುವುದು ಜೈನ ಸ್ತ್ರೀಯರ ಅನುಕರಣೀಯವಾದ ಆದರ್ಶ ಗುಣವಾಗಿದೆ. ಜೈನಧರ್ಮ, ಜೈನ ಸಂಸ್ಕೃತಿ, ಕಲೆಗಳಲ್ಲಿ ಜೈನ ಮಹಿಳೆಯರಿಗೆ ಬಹಳ ಹಿಂದಿನಿಂದಲೂ ಆಸಕ್ತಿ ಇರುವುದು ಕಾಣುತ್ತದೆ. ಇಂಥವರ ಹಿರಿಮೆಯನ್ನು ಶಿಲಾಶಾಸನಗಳೂ, ಓಲೆಗರಿ ಗ್ರಂಥಗಳೂ ಇತರ ಸಾಹಿತ್ಯ ಕೃತಿಗಳೂ ಮುಕ್ತಕಂಠದಿಂದ ಹೊಗಳಿವೆ.

ದಕ್ಷಿಣ ಭಾರತದಲ್ಲಿ, ಅದರಲ್ಲಿಯೂ ಕರ್ನಾಟಕದಲ್ಲಿ ಬಸದಿ ಕಟ್ಟಿಸಿದ, ಕಾವ್ಯ ಬರೆಯಿಸಿದ, ಗ್ರಂಥಗಳನ್ನು ಪ್ರತಿ ಮಾಡಿಸಿದ ಉಲ್ಲೇಖಗಳು ಉಪಲಬ್ಧವಾಗಿವೆ. ತಿಪಟೂರಿನ ಶಾಸನದಲ್ಲಿ ಸತಿಹರ್ಯಲೆ ಸಮಾಧಿ ವಿಧಿಯಿಂದ ಮುಡಿಪಿದ ಸನ್ನಿವೇಶವನ್ನು ಸ್ವಾರಸ್ಯವಾಗಿ ವರ್ಣಿಸಲಾಗಿದೆ. ಅವಳ ಬರವನ್ನು ಕೇಳಿ ಅಮರಾವತಿ ಪುರದ ದೇವಿ ಶಂಕುಲವು ಸಮಿಪಿಸಿ ನೂಪುರವನ್ನೂ ಮುತ್ತಿನ ಹಾರವನ್ನೂ ಕಟಕ ಕೇಯೂರ, ವಜ್ರದುಂಗುರ ಹಾಗೂ ಮಾಣಿಕ್ಯದ ಓಲೆಯನ್ನು ತೊಡಿಸಿ ತಾವು ತಂದ, ದೇವಲೋಕದ ವಿಮಾನವನ್ನು ಹತ್ತುವಂತೆ ಅವರು ಹರ್ಯಲೆಯನ್ನು ಪ್ರಾರ್ಥಿಸುತ್ತಾರೆ:

**ಏಟೆ ವಿಮಾನಂ ಬರೆ ಸುರಾಂಗನೆಯರ್ ನಳಿತೋಳ ಸುಣ್ಪೊಗರ್ ।**
**ತೋಱುವಿನಂ ಮಹೋತ್ಸವದೆ ಸೇಸೆಯನಿಕ್ಕಿ ಸುರಾನಕಸ್ವನಂ ॥**
**ಮಿಱೆಘನಾಘನಧ್ವನಿಯನೆತ್ತಿದ ಸತ್ತಿಗೆ ಚಂದ್ರ ಬಿಂಬಮಂ!**
**ಬೀಱೆ ವಿಲಾಸದಿಂ ಪಿಡಿದು ಚಾಮರಮಿಕ್ಕೆ ಸಮಂತು ಪೊಕ್ಕಳಾ ।**
**ನೀಱೆ ಮಹಾನುಭಾವೆ ಸತಿ ಹರ್ಯಲದೇವಿ ಸುರೇಂದ್ರ ಲೋಕಮಂ ॥**

ಐದು ಸಾಲಿನ ಈ ವೃತ್ತ ಕನ್ನಡ ಸಾಹಿತ್ಯದಲ್ಲಿ ಒಂದು ಅಪೂರ್ವ ವೃತ್ತವಾಗಿದೆ. ಇದರಲ್ಲಿ ನಿರೂಪಿತಳಾಗಿರುವ ಸತಿ ಹರ್ಯಲೆಯ ಜೀವನ ಒಂದು ಅಪೂರ್ವ ವೃತ್ತಾಂತವಾಗಿದೆ.

ಇದರಂತೆ ಶಾಂತಲಾದೇವಿ, ಅತ್ತಿಮಬ್ಬೆ, ಗುಂಡನಜ್ಜಿ, ಸಾವಿಯಬ್ಬೆ, ಚಾಗಲದೇವಿ, ಚಟ್ಟಲದೇವಿ, ಬಾಚಲದೇವಿ, ಏಚಲೆ ಮೊದಲಾದ ಹತ್ತಾರು ಜನ ಶ್ರೇಷ್ಠ ಗುಣಸಂಪನ್ನರೂ ಸತೀಸಾಧ್ವಿಯರೂ ಆದ ಜೈನ ಸ್ತ್ರೀ ರತ್ನಗಳ ಬಾಳಿನ ಮಹೋನ್ನತಿಯನ್ನು ಕನ್ನಡನಾಡಿನ ಎಲ್ಲ ಭಾಗಗಳ ಶಿಲಾಶಾಸನಗಳೂ ಆಚಂದ್ರಾರ್ಕ ಸ್ಥಾಯಿಯಾಗಿ ಸಾರಿ ಹೇಳುತ್ತಿವೆ.

ಹತ್ತನೆಯ ಶತಮಾನದ ಪೂರ್ವಭಾಗದಲ್ಲಿದ್ದ ಚಾಲುಕ್ಯ ಚಕ್ರವರ್ತಿ ಎರಡನೆಯ ದಂಡನಾಯಕನಾದ ಮಲ್ಲಪ್ಪಯ್ಯನಿಗೆ ಅತ್ತಿಮಬ್ಬೆ ಮತ್ತು ಗುಂಡಮಬ್ಬೆ

ಎಂಬಿಬ್ಬರು ಹೆಣ್ಣು ಮಕ್ಕಳಿದ್ದರು. ಮಲ್ಲಪ್ಪಯ್ಯ ವಿದ್ಯಾವಿಶಾರದನಾಗಿದ್ದನು. ಮಲ್ಲಪ್ಪಯ್ಯ ತನ್ನ ಈ ಹೆಣ್ಣು ಮಕ್ಕಳಿಬ್ಬರನ್ನೂ ಚಾಲುಕ್ಯರ ಸೇನಾಧಿಪತಿಯಾಗಿದ್ದ ನಾಗದೇವನಿಗೆ ಕೊಟ್ಟು ಮದುವೆಮಾಡಿದನು. ಹೀಗಿರುವಾಗ, ಒಮ್ಮೆ ಕಾಳಗ ಒಂದರಲ್ಲಿ ನಾಗದೇವ ಮರಣಹೊಂದಿದನು. ಆಗ ಗುಂಡಮಬ್ಬೆ ತನ್ನ ಪತಿಯೊಡನೆ 'ಸತಿ' ಅಥವಾ ಸಹಗಮನ ಆಚರಿಸಿದಳು. ಜೈನ ಮಹಿಳೆ ಹೀಗೆ ಸಹಗಮನವನ್ನು ಆಚರಿಸುವುದು ಒಂದು ಅಪರೂಪ ಪ್ರಸಂಗವಾಗಿದೆ.

ಅತ್ತಿಮಬ್ಬೆ ತನ್ನ ಮಗ ಅಣ್ಣಿಗದೇವನನ್ನು ರಕ್ಷಿಸಲು 'ಸತಿ' ಆಚರಿಸದೆ ಉಳಿದಳು. ಅತ್ತಿಮಬ್ಬೆಗೆ ಬಾಲ್ಯದಿಂದಲೂ ಇದ್ದ ಜೈನಧರ್ಮದ ಆಸಕ್ತಿ-ಶ್ರದ್ಧೆ ದ್ವಿಗುಣಗೊಂಡಿತು. ಇಂದಿಗೆ ಸರಿಯಾಗಿ ಒಂದು ಸಾವಿರ ವರುಷದ ಹಿಂದೆ ಚಾಲುಕ್ಯ ರಾಜ್ಯದಲ್ಲಿ ಬಾಳಿ ಬೆಳಗಿದ ಮಹಾಸಾಧ್ವಿ ಅತ್ತಿಮಬ್ಬೆಯ ಭವ್ಯವಾದ ಬಾಳು ದಿವ್ಯನಾದ ಕಾವ್ಯವಾಗಿ ಮಹಾಕವಿ ರನ್ನನ ರಸದೊರತೆಯಾಗಿ ರೂಪಗೊಂಡಿದೆ. ಅವಳ ಪರಮ ಪವಿತ್ರವಾದ ಉದಾತ್ತ ಜೀವನದ ವಿವರಗಳು ಕವಿಯ ಪವಿತ್ರಾಂತಃ ಕರಣದಿಂದ ಹೊರಹೊಮ್ಮಿದೆ. ಆಕೆ ಕಾವ್ಯವನ್ನು ಬರೆಯದೆ ಇದ್ದರೂ ಮಹಾಕಾವ್ಯದ ಬಾಳನ್ನು ಬಾಳಿದಳು, ಬೆಳಗಿದಳು, ಆಳಿದಳು.

ಮಹಾಕವಿ ಪೊನ್ನನಿಂದ ರಚಿತವಾಗಿದ್ದ ಶಾಂತಿಪುರಾಣ ಕಾವ್ಯದ ಸಾವಿರ ಓಲೆ ಪ್ರತಿಗಳನ್ನು ಮಾಡಿಸಿ ಅದರ ಜೊತೆಗೆ ತೀರ್ಥಂಕರರ ಸಾವಿರ ಪ್ರತಿಮೆಗಳನ್ನೂ, ಆ ಪ್ರತಿಮೆಗಳನ್ನಿಡಲು ಸಾವಿರ ಮಂಟಪಗಳನ್ನೂ, ಸಾವಿರ ಜಯಘಂಟೆಗಳನ್ನೂ ಬಂಗಾರದಲ್ಲಿ ಮಾಡಿಸಿ ದಾನಮಾಡಿದಳು. ಇದರಿಂದ ದಾನಚಿಂತಾಮಣಿ ಅತ್ತಿಮಬ್ಬೆ ಎಂಬ ಶಾಶ್ವತ ಕೀರ್ತಿಗೆ ಪಾತ್ರಳಾದಳು. ಇದಲ್ಲದೆ ಮಹಾಕವಿ ರನ್ನನಿಂದ ಅಜಿತ ಪುರಾಣವನ್ನು ಬರೆಸಿದಳು. ರನ್ನ ತನ್ನ ಈ ಕಾವ್ಯದಲ್ಲಿ ಅತ್ತಿಮಬ್ಬೆಯ ಚರಿತವನ್ನು ಕುರಿತು 'ಅಳುರದು ಕಿರ್ಚು ಮುಟ್ಟದು ವಿಷಾಹಿ ಮಹಾಸತಿಯಿರ್ದ ಮಂಡಲಂ । ಬೆಳೆವುದು ಬೇಡಿದಂತೆ ಮಳೆಕೊಳ್ವುದೆನಿಪ್ಪ ಜಸಕ್ಕೆ ನೋಂತು ಭೂತಿಳಕ ಪವಿತ್ರೆಯಂ ಗುಣಪವಿತ್ರೆಯನಾಸತಿಯಂ ಮಹಾಸತಿತಿಳಕೆಯನತ್ತಿಮಬ್ಬರಸಿಯಂ ಪೆಸರ್ಗೊಳ್ವುದು ಪುಣ್ಯಕಾರಣಂ ॥' ಎಂದು ಮುಕ್ತಕಂಠದಿಂದ ಕೊಂಡಾಡಿದ್ದಾನೆ. ಈ ಕೊಂಡಾಟ ಕೇವಲ ಕವಿಯ ಕೃತಜ್ಞತೆಯ ಕಾಣಿಕೆಯಷ್ಟೇ ಆಗಿರದೆ ಅತ್ತಿಮಬ್ಬೆಯ ಧವಳಕೀರ್ತಿಯನು ಸಾರುವ, ಅವಳ ಪರಮ ಪವಿತ್ರ ಶೀಲದ ಆಕಳಂಕತೆಯನ್ನು ಬಿತ್ತರಿಸುವ ಅನಾದೃಶ ಜಯಘೋಷವಾಗಿದೆ. ಅತ್ತಿಮಬ್ಬೆ, ಜಗತ್ತಿನ ಸ್ತ್ರೀಯರ ಸಾಲಿನಲ್ಲಿ ಅಗ್ರಮಾನ್ಯಳಾಗಿ ಅಲಂಕರಿಸುವಾಕೆಯಾಗಿದ್ದಾಳೆ.

ಪ್ರಸಿದ್ಧ ಸೇನಾಧಿಕಾರಿ ಗಂಗರಾಜನ ಪತ್ನಿ ಅಕ್ಕಲೆ ವ್ಯಾಪಾರದಲ್ಲಿ ಸತ್ಯವಂತೆ.

ಯುದ್ಧದಲ್ಲಿ ಜಯದೇವತೆಯಂತೆ ಇದ್ದಳು. 1118ರಲ್ಲಿ ಶ್ರವಣಬೆಳುಗೊಳದಲ್ಲಿ ಜಿನಾಲಯವನ್ನು ಕಟ್ಟಿಸಿ, ಅನ್ನ, ವಸತಿ, ಔಷಧಿ ಮತ್ತು ವಿದ್ಯಾದಾನಗಳನ್ನು ಮಾಡಿದಳು.

ಹೊಯ್ಸಳ ವಿಷ್ಣುವರ್ಧನನ ಮಹಾರಾಣಿ ಶಾಂತಲಾದೇವಿ ಲಾವಣ್ಯವತಿಯೂ, ನೃತ್ಯಪ್ರವೀಣೆಯೂ, ಲಲಿತ ಕಲೋಪಾಸಕಳೂ ಆಗಿದ್ದಳು. ಕ್ರಿ.ಶ. 1123ರಲ್ಲಿ ಈಕೆ ಶ್ರವಣಬೆಳುಗೊಳದಲ್ಲಿ ಒಂದು ಬಸದಿ ಕಟ್ಟಿಸಿ, ಒಂದು ಉದ್ಯಾನವನ್ನು ಮಾಡಿಸಿ ಭಕ್ತಜನರ ನಿತ್ಯ ಪೂಜೆಗೋಸ್ಕರ ಒಂದು ಹಳ್ಳಿಯನ್ನೇ ದತ್ತಿಯಾಗಿ ಬಿಟ್ಟುಕೊಟ್ಟಳು. ಹತ್ತಾರು ಶಿಲಾಶಾಸನಗಳು ಈ ಜೈನ ಮಹಿಳೆಯಾದ ಶಾಂತಲಾದೇವಿಯು ಎಸಗಿದ ಜೈನಧರ್ಮದ ಪ್ರಚಾರ ಕಾರ್ಯವನ್ನು ಪ್ರಶಂಸಿಸಿವೆ. ವಿಷ್ಣುವರ್ಧನ ಮತ್ತು ಶಾಂತಲೆಯರ ದಾಂಪತ್ಯವು ಆದರ್ಶದ ಚರಮಸೀಮೆಯನ್ನು ಮುಟ್ಟಿದ್ದಿತು. ಅವಳ ಪತಿಭಕ್ತಿ ವಿಷ್ಣುವರ್ಧನನ ಸಂಪೂರ್ಣ ವ್ಯಕ್ತಿತ್ವವನ್ನೇ ಆವರಿಸಿತ್ತು. ಇದಕ್ಕೆ ನಿದರ್ಶನವಾಗಿ ಒಂದು ಪದ್ಯವನ್ನು ನೋಡಬಹುದು:

**‘ಸತತಂ ನೋಟ್ಪೊಡೆ ಲಕ್ಷ್ಮಿದೇವತೆ ರಣ ವ್ಯಾಪಾರದೊಳ್ ಖೆಟ್ಟಿದೇ!**
**ವತೆ ಬಿಣ್ಪಿಂದಮೆ ಭೂಮಿದೇವತೆ ಜನಕ್ಕೆಲ್ಲಂದದಿಂ ಪುಣ್ಯದೇ ।**
**ವತೆ ವಾಗ್ದೇವತೆ ವಿದ್ಯೆಯೊಳ್ ಸಕಲಕಾರ್ಯೋದ್ಯೋಗದೊಳ್ ಮಂತ್ರದೇ!**
**ವತೆ ನಾಥಂಗೆನೆ ಶಾಂತಿದೇವಿಯನದಿನ್ನೇವಣ್ಣಿಪಂ ಬಣ್ಣಿಪಂ ॥**

ತುಂಬು ಯೌವನದಲ್ಲಿ, ತನ್ನ ಕೀರ್ತಿಯ ಪರಾಕಾಷ್ಠೆಯಲ್ಲಿ ಶಾಂತಲೆಯು ಸನ್ಯಾಸನವಿಧಿಯನ್ನು ಅಂಗೀಕರಿಸಿ ಪ್ರಾಣತ್ಯಾಗ ಮಾಡಿದಳು. ಅತ್ತಿಮಬ್ಬೆಯ ಕಾರ್ಯಕ್ಷೇತ್ರವು ಧರ್ಮವಾದರೆ, ಶಾಂತಲೆಯ ಕಾರ್ಯಕ್ಷೇತ್ರವು ಮುಖ್ಯವಾಗಿ ಕಲೆಯಾಗಿತ್ತು. ಒಬ್ಬಳು ಗಂಡನ ಸಾವಿನ ನಂತರ ‘ಮಹಾಸತಿ’ಯಾದರೆ ಮತ್ತೊಬ್ಬಳು ಮುತ್ತೈದೆಯಾಗಿಯೇ ಮಹಾಸತಿಯಾದಳು.

ಹೊಯ್ಸಳ ಮನೆತನದ ಪ್ರಸಿದ್ಧ ಬಲ್ಲಾಳನ ಆಸ್ಥಾನವನ್ನು ಬೆಳಗಿಸಿದ ಕೀರ್ತಿ ಕಂತಿಯದು. ಈಕೆಯ ಅಸ್ತಿತ್ವದ ಬಗ್ಗೆ ವಿದ್ವಾಂಸರಲ್ಲಿ ಭಿನ್ನಾಭಿಪ್ರಾಯವಿದೆ. ಕಂತಿ ಮತ್ತು ನಾಗಚಂದ್ರನಿಗೆ ಆಗಾಗ್ಗೆ ಕಾವ್ಯ ವಿಚಾರದಲ್ಲಿ ಸ್ಪರ್ಧೆ ನಡೆಯುತ್ತಿತ್ತು. ಕಂತಿ–ಹಂಪರ ಸಮಸ್ಯೆಗಳು ಕನ್ನಡ ಸಾಹಿತ್ಯದಲ್ಲಿ ಸ್ವಾರಸ್ಯವಾದ ಭಾಗವಾಗಿದೆ. ಅನೇಕ ವರ್ಷಗಳಾದ ಮೇಲೆ 1560ರಲ್ಲಿ ಇದ್ದ ಬಾಹುಬಲಿಯೆಂಬ ಕನ್ನಡದ ಕವಿ ಕಂತಿಯನ್ನು ಕುರಿತು ‘ಅಭಿನವ ವಾಗ್ದೇವಿ’ಯೆಂದು ಕರೆದು ಮುಕ್ತಕಂಠದಿಂದ ಹೊಗಳಿದ್ದಾನೆ.

ಹೀಗೆ ಜೈನ ಮಹಿಳೆಯರು ದಾನಿಗಳಾಗಿ, ಅನನ್ಯ ಪತಿಭಕ್ತೆಯರಾಗಿ,

ಕಂತಿಯರಾಗಿ, ತ್ಯಾಗಿಗಳಾಗಿ, ಆದರ್ಶ ಮಾತೆಯರಾಗಿ, ಮತೋದ್ಧಾರಕರಾಗಿ, ಧರ್ಮ ದೇವತೆಯರಾಗಿ, ಜಂಗಮ ಜಿನಶಾಸನದಂತೆ ಶೋಭಿಸಿ ಘನತೆ ಗೌರವಗಳಿಂದ ಲೋಕ ವಿಖ್ಯಾತರಾಗಿದ್ದಾರೆ. ಅವರ ಆದರ್ಶ ಗುಣಗಳ ಸಮೂಹ ಸಾರವನ್ನು ಕನ್ನಡದ ಕವಿಯೊಬ್ಬ ಹೀಗೆ ಬಣ್ಣಿಸಿದ್ದಾನೆ:

**ಗುಣದೊಳ್ ರೂಪಿನೊಳ್ ಒಳ್ಪಿನೊಳ್ ಸೊಬಗಿನೊಳ್ ಶೃಂಗಾರದೊಳ್**
**ಸೌಮ್ಯ ಲ ।**
**ಕ್ಷಣದೊಳ್ ಮೈಮೆಯೊಳ್ ಓಜೆಯೊಳ್ ವಿಭವದೊಳ್ ಶಿಲಂಗಳೊಳ್**
**ಭೃತ್ಯ ಪೋ ।**
**ಕ್ಷಣದೊಳ್ ಭೋಗದೊಳಾರ್ಪಿನೊಳ್ ವಿಭೂತಿಯೊಳ್ ಕಾರುಣ್ಯದೊಳ್**
**ಪೋಲಿಸ ।**
**ಲ್ಕೆಣೆಯಾರ್ ಗೆಲ್ವ ಬೆಡಂಗಿಗೆಂದನುದಿನಂ ವಿದ್ವಜ್ಜನಂ ಬಣ್ಣಿಕುಂ ॥**

## ಆಧಾರ ಗ್ರಂಥಗಳು ಮತ್ತು ಲೇಖನಗಳು:


1. ವಿದ್ಯಾಭೂಷಣ ಶ್ರೀ ಕೆ. ಭುಜಬಲಿ ಶಾಸ್ತ್ರಿಗಳು. ಆದರ್ಶ ಜೈನ ಮಹಿಳೆಯರು.
2. ಕಮಲಾ ಹಂಪನಾ. (1968). ಆದರ್ಶ ಜೈನ ಮಹಿಳೆಯರು. ಶ್ರೀ ಮಹಾವೀರರ ಮಿಷನ್. ಬೆಂಗಳೂರು.
3. ರಾಜರತ್ನಂ ಜಿ. ಪಿ. ಜೈನಪುರಾಣಗಳಲ್ಲಿ ಭವಾವಳಿ.
4. ಚಿದಾನಂದ ಮೂರ್ತಿ ಎಂ. (2015). ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ. ಸಪ್ನ ಬುಕ್ ಹೌಸ್. ಬೆಂಗಳೂರು.
5. ಕಮಲಾ ಹಂಪನಾ. ಕಂತಿಯರು (ಲೇಖನ). ಆರತಿ.
6. ಕಮಲಾ ಹಂಪನಾ. ನುಡಿತೋರಣ (ಲೇಖನ). ದಾನ ಚಿಂತಾಮಣಿ.
7. ನರಸಿಂಹಾಚಾರ್ ಆರ್. (1975). ಶಾಸನ ಪದ್ಯಮಂಜರಿ. ಬೆಂಗಳೂರು ವಿಶ್ವವಿದ್ಯಾಲಯ. ಬೆಂಗಳೂರು.


**ಲೇಖನ ಮೂಲ:** ಮುಳುಗುಂದ ಚ. ವಿ. (ಸಂ). (1986). ಮಾತೋಶ್ರೀ (ಶ್ರೀಮತಿ ಗಂಗಮ್ಮ ವೀರಪ್ಪ ಚಿನಿವಾರ ಅವರಿಗೆ ಸಮರ್ಪಿಸಿದ ಅಭಿನಂದನ ಗ್ರಂಥ). ಮಾತೋಶ್ರೀ ಪ್ರಕಾಶನ. ಮುದ್ದೇಬಿಹಾಳ. ಪುಟ 273–283.